

## ಸರ್ವಮೂಲ ಸಂದೇಶ

### ಮತ್ತನಾದ ಸಾಧಕನಿಗೆ ಹನುಮಂತನ ಎಚ್ಚರಿಕೆ

**ನ ವಿಸ್ಮೃತಿಸ್ತೇ ರಘುವರ್ಯ ಕಾರ್ಯೇ ಕಾರ್ಯಾ ಕಥಂಚಿತ್ಸ ಹಿನೋಽಭಿಪೂಜ್ಯಃ।**
**ನ ಚೇತ್ಸ್ವಯಂ ಕರ್ತುಮಭೀಷ್ಟಮದ್ಯ ತೇ ಧ್ರುವಂ ಬಲೇನಾಪಿ ಹಿ ಕಾರಯಾಮಿ ॥**

ಎಲೈ ಜೀವನೇ, ನಿನಗೆ ಈ ಸಾಧನಾದೇಹವನ್ನು ಕೊಟ್ಟು ನಿನ್ನಿಂದ ಪ್ರತಿಕ್ಷಣದಲ್ಲಿಯೂ ಕರ್ಮವನ್ನು ಮಾಡಿಸುತ್ತಿರುವ ಭಗವಂತನಾದ ಶ್ರೀ ರಾಮಚಂದ್ರನ ಸೇವಾ ಕಾರ್ಯದಲ್ಲಿ ಎಂದಿಗೂ ಮರೆವು, ಆಲಸ್ಯ ಬರದಿರಲಿ. ನೀನು ಸ್ವೇಚ್ಛೆಯಿಂದಲೇ ಆತನ ಸೇವಾ ಕಾರ್ಯದಲ್ಲಿ ತೊಡಗದಿದ್ದರೆ ಸಾತ್ವಿಕನಾದ ನಿನ್ನಿಂದ ನಾನು ಬಲವಂತನಾಗಿ ಮಾಡಿಸಬೇಕಾಗುತ್ತದೆ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–೭ ಸಂಚಿಕೆ–೧೧ ಸರ್ವಧಾರಿ ಸಂ.॥ ಆಶ್ವಯುಜ–ಕಾರ್ತಿಕ ನವೆಂಬರ್ ೨೦೦೮**

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 7 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 9 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 12 |
| **ದುರ್ಮರಣವನ್ನು ಸುಮರಣವಾಗಿಸುವ ಪ್ರಕ್ರಿಯೆ** | | 14 |
| **ತುಳಸಿ–ವಿಶೇಷ ಲೇಖನ** | ಡಾ। ವ್ಯಾಸನಕೆರೆ ಪ್ರಭಂಜನಾಚಾರ್ಯ | 17 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 19 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 21 |
| **ಜೀವನಯಜ್ಞ** | ಶ್ರೀ ಸುನಂದಕೀ | 26 |
| **ಶ್ರೀಮಧ್ವಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 29 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣಾಚಾರ್ಯ | 31 |
| **ವಿಷ್ಣುಪುರಾಣ** | ಸ್ಫೂರ್ತಿ | 33 |
| **ಅವಲೋಕನ** | ವಿ॥ ಸಗ್ರಿ ರಾಘವೇಂದ್ರಾಚಾರ್ಯ | 35 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 38 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**
ವಿ॥ ಬಲರಾಮ ಭಟ್ಟ, ಉಡುಪಿ
ವಿ॥ ಮೋಹನಾಚಾರ್ಯ ಬೆಂಗಳೂರು
ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ
ಶ್ರೀ ಹರ್ಷ ಬೆಂಗಳೂರು



ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು
ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

| | | | |
|---|---|---|---|
| **ಬಿಡಿ ಪ್ರತಿ** | : **ರೂ. 8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00



ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು

# ಉದ್ಧವಗೀತೆ

-ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ಅಂತರ್ಬಹಿಶ್ಚ ಸ್ಥಿರಜಂಗಮೇಷು ಬ್ರಹ್ಮಾತ್ಮಭಾವೇನ ಸಮನ್ವಯೇನ।**
**ವ್ಯಾಪ್ತ್ಯಾऽವ್ಯವಚ್ಛೇದಂ ಅಸಂಗಮಾತ್ಮನೋ ಮುನಿರ್ನಭೋವತ್ ವಿತತಸ್ಯ ಭಾವಯೇತ್॥**

### ಸ್ಥಿರ-ಜಂಗಮೇಷು

ಜೀವರನ್ನು ಎರಡು ರೀತಿಯಾಗಿ ವಿಭಾಗ ಮಾಡಿದ್ದಾರೆ. ಕೆಲವರು ಸ್ಥಿರ. ಉಳಿದವರು ಜಂಗಮರು. ಸ್ಥಿರ ಅಂದರೆ ಒಂದೇ ಕಡೆ ಇದ್ದು ಜೀವನ ನಡೆಸುವವರು. ಜಂಗಮರು ಗಮನಾಗಮನ ಶೀಲರು. ಸ್ಥಿರ ಜೀವರಾಶಿಗಳು ಯಾರು? ಮರಗಳು, ಗಿಡಗಳು, ಬಳ್ಳಿಗಳು ಇತ್ಯಾದಿ ಇತ್ಯಾದಿ...., ಈ ಜಾತಿಯ ಪ್ರಾಣಿಗಳು ಸ್ಥಿರರು. ಮರಗಿಡಗಳು ಪ್ರಾಣಿಗಳೇ? ಎನ್ನುವ ಪ್ರಶ್ನೆ ಮಾಡಬೇಡಿ. ಪ್ರಾಣ ಇರುವವರೆಲ್ಲರೂ ಪ್ರಾಣಿಗಳೇ. ಉಸಿರಾಡುವವರೆಲ್ಲ ಪ್ರಾಣ ಇರುವವರೇ. ಮರಗಿಡಗಳೂ ಕೂಡ ಉಸಿರಾಡುತ್ತವೆ. ಅವುಗಳಿಗೂ ಜೀವ ಇದೆ. ಅವುಗಳಿಗೂ ಸುಖ-ದುಃಖಗಳ ಸಂವೇದನೆ ಇದೆ. ಸಂಗೀತದಿಂದ ಮುದಗೊಂಡ ಸಸ್ಯಗಳಲ್ಲಿ ಫಲ-ಪುಷ್ಪ ಸಮೃದ್ಧವಾದದ್ದಕ್ಕೆ ನಮ್ಮ ಆಚಾರ್ಯರೇ ಸುಂದರ ಉದಾಹರಣೆ. ಹಾಗಾಗಿ ಸ್ಥಿರವಾದ ಪ್ರಾಣಿಗಳು ಎನ್ನುವುದನ್ನು ಪ್ರತಿಯೊಬ್ಬ ಸಹೃದಯನೂ ಅಂಗೀಕರಿಸಬೇಕು. ವೈಜ್ಞಾನಿಕವಾಗಿಯೂ ಕೂಡ ಸಿದ್ಧವಾದ ಸತ್ಸಿದ್ಧಾಂತ. ಗಿಡ-ಬಳ್ಳಿಗಳು ಮಣ್ಣನ್ನು ಗಟ್ಟಿಯಾಗಿ ಹಿಡಿದುನಿಂತ ಸ್ಥಿರ ಜೀವರಾಶಿಗಳು. ಒಂದು ರೀತಿ ನೋಡಿದರೆ ಬಳ್ಳಿಗಳೂ ಮಣ್ಣಲ್ಲಿ ಹುಟ್ಟಿದರೂ ಕೂಡ ಇನ್ನೊಂದು ಊರುಗೋಲನ್ನು ಆಶ್ರಯಿಸಿ ಸಂಚರಿಸುವ ಒಂದು ರೀತಿಯ ಜಂಗಮವೂ ಹೌದು. ಇಷ್ಟು ವ್ಯತ್ಯಾಸ ಸ್ಥಿರ ಜಂಗಮಗಳಿಗೆ. ಸ್ಥಿರ ಒಂದು ಕಡೆ ನೆಲವನ್ನು ಕಚ್ಚಿ ಗಮನಶೀಲವಾಗಿದ್ದರೆ, ಜಂಗಮಗಳು ಒಂದು ಕಡೆ ಸ್ಥಿರವಾಗದೆ ಉದ್ದಗಲಕ್ಕೆ ಯಥೇಚ್ಚವಾಗಿ ಸಂಚರಿಸುವವು. ಅದಕ್ಕೆಂದೇ ಹುಳ-ಹುಪ್ಪಟಗಳು, ಪಕ್ಷಿ-ಪ್ರಾಣಿಗಳು, ನರ-ವಾನರರು ಇವರನ್ನೆಲ್ಲ ಜಂಗಮರೆಂದು ವ್ಯವಹರಿಸುತ್ತವೆ.

### ಅಂತರ್ಬಹಿಃ ಬ್ರಹ್ಮಾತ್ಮಭಾವೇನ

ಸ್ಥಿರವಾದ ಗಿಡ-ಮರಗಳಲ್ಲಿ ಸಿಗುವ ಸುಗಂಧ ಫಲ-ಪುಷ್ಪಗಳು, ಜಂಗಮವಾದ ಜೀವರಾಶಿಗಳಲ್ಲಿ ಕಾಣಿಸಿಕೊಳ್ಳುವ ಸೃಷ್ಟ್ಯಾದಿ ದೈಹಿಕ ಕ್ರಿಯೆಗಳು, ಜ್ಞಾನ ಇಚ್ಛಾದಿ ಮಾನಸಿಕ

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ

ಕ್ರಿಯೆಗಳು ಎಲ್ಲವೂ ಕೂಡ ಖಂಡಿತವಾಗಿಯೂ ನಮ್ಮಿಂದ ಅಲ್ಲ. ಅದು ಒಳಗಿದ್ದ ಅಂತರ್ನಿಯಾಮಕನಾಗಿ ಅಂತರ್ಯಾಮಿ ಎನಿಸಿದ ಭಗವಂತನ ಸಾಮರ್ಥ್ಯದಿಂದ. ನಮ್ಮ ಒಳಗಿದ್ದ ಭಗವಂತನ ರೂಪಕ್ಕೆ ಆತ್ಮ ಅನ್ನುತ್ತಾರೆ. ಈ ಆತ್ಮಭಾವದಿಂದಲೇ ಸಕಲ ಪ್ರವೃತ್ತಿ ನಿವೃತ್ತಿಗಳೂ ಕೂಡ.

ದೇಹದ ಹೊರಗೆ ನಮಗೆ ಬೇಕಾದ ಸಕಲ ವಸ್ತುಗಳ ನಿರ್ಮಾಣ ಭಗವಂತನ ವ್ಯಾಪ್ತರೂಪದ ಸಾಮರ್ಥ್ಯದಿಂದ. ಪಿಂಡಾಂಡದ ಹೊರಗೆ, ಬ್ರಹ್ಮಾಂಡದ ಹೊರಗೆ ದೇವರು ನಮ್ಮನ್ನು ರಕ್ಷಣೆಮಾಡುವ ಬಗೆ ಭಗವಂತನ ವ್ಯಾಪ್ತರೂಪದಿಂದ, ಬ್ರಹ್ಮರೂಪದಿಂದ. ಬ್ರಹ್ಮರೂಪದಿಂದ ಬ್ರಹ್ಮಾಂಡ-ಪಿಂಡಾಂಡಗಳ ಹೊರಗೆ, ಆತ್ಮರೂಪದಿಂದ ನಮ್ಮ ಒಳಗೆ ಭಗವಂತ ತುಂಬಿಕೊಂಡು ಸರ್ವಕ್ರಿಯೆಗಳನ್ನು ನಡೆಸುತ್ತಾನೆ.

**ಅವ್ಯವಚ್ಛೇದಂ ನಭೋವತ್**

ದೇವರು ಒಳಗೆ ಅಣುರೂಪದಿಂದ ತುಂಬಿ, ಹೊರಗೆ ವ್ಯಾಪ್ತರೂಪದಿಂದ ಜಗತ್ತಿನ ನಿಯಮನಾದಿಗಳನ್ನು ಮಾಡುತ್ತಾನೆ. ಒಂದು ಪ್ರಶ್ನೆ ದೇವರು ಎಷ್ಟು ಎಂದು. ಅಣುರೂಪದ ದೇವರು ವ್ಯಾಪ್ತನಾಗಲು ಸಾಧ್ಯವಿಲ್ಲ. ವ್ಯಾಪ್ತನಾಗಿದ್ದರೆ ಅಣುವಾಗಲು ಸಾಧ್ಯವಿಲ್ಲ. ಒಬ್ಬನೇ ದೇವರಿಗೆ ಈ ಎರಡೂ ಸಾಧ್ಯವೇ. ದೇವರು ಎರಡು ಎಂದು ಒಪ್ಪಲು ಸಾಧ್ಯವೇ ಇಲ್ಲ ಅಲ್ಲವೇ? ಈ ಪ್ರಶ್ನೆಗೆ ಅವಧೂತರು ಆಕಾಶದಿಂದ ಉತ್ತರವನ್ನು ಕಂಡುಕೊಂಡರು. ಒಂದೇ ಆಕಾಶ ಮನೆಯ ಒಳಗೆ ಮನೆಯ ಹೊರಗೆ ಎಲ್ಲಕಡೆ ತುಂಬಿಕೊಂಡಿದೆ. ಒಂದೇ ಆಕಾಶ ಹೇಗೆ ಒಳಗೆ ಹೊರಗೆ ತುಂಬಿಕೊಂಡಿದೆಯೋ ಅದೇ ರೀತಿ ಆಕಾಶದಂತೆ ನಮ್ಮ ದೇವರೂ ಕೂಡ ಒಳಗೆ ಹೊರಗೆ ಯಾಕೆ ತುಂಬಿಕೊಂಡಿರಬಾರದು? ಆಕಾಶ ಮನೆಯ ಒಳಗೆ ಅಣುವಾಗಿದ್ದರೆ. ಮನೆಯ ಹೊರಗೆ ವಿಭುವಾಗಿರುತ್ತದೆ. ಅದೇ ರೀತಿ ದೇವರಿಗೂ ಅಣುತ್ವ ಮಹತ್ವವನ್ನು ಆಕಾಶದಂತೆ ತಿಳಿಯಬಹುದು.

**ಅಸಂಗಂ ನಭೋವತ್**

ಮನೆ ಸುಟ್ಟಾಗ ಮನೆಯ ಒಳಗಿದ್ದವ ಸುಟ್ಟು ಕರಕಲಾಗುವಂತೆ ದೇಹ ಸುಟ್ಟಾಗ ದೇಹದ ಒಳಗಿದ್ದ ಭಗವಂತ, ಸುಟ್ಟು ಕರಕಲಾಗುತ್ತಾನೆಯೇ? ಬ್ರಹ್ಮಾಂಡ ನಾಶವಾದಾಗ ಬ್ರಹ್ಮಾಂಡದಲ್ಲಿ ತುಂಬಿದ ಭಗವಂತ ಇಲ್ಲ ಎಂದಾಗುತ್ತಾನೆಯೇ? ಈ ಪ್ರಶ್ನೆಗೆ ಉತ್ತರ ಅವಧೂತನು ಆಕಾಶದಿಂದ ಕಂಡುಕೊಂಡನು. ಆಕಾಶ ಹೇಗೋ ಹಾಗೇ ಭಗವಂತ. ಮನೆ ನಾಶವಾದರೂ ಮನೆ ಒಳಗಿನ ಅವಕಾಶಕ್ಕೆ ನಾಶವಿಲ್ಲ. ದೇಹ ಸತ್ತರೂ ದೇಹಾವಕಾಶಕ್ಕೆ

(40ನೇ ಪುಟದಿಂದ....)

ಇದು ವೇದ-ಮಹಾಭಾರತ ಮುಂತಾದ ಇತಿಹಾಸ-ಪುರಾಣಗಳ ಸಾರ.

ವಿದ್ವತ್ ಪ್ರಪಂಚ



# ಗೀತಾಮೃತ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಧರ್ಮಯುದ್ಧಕ್ಕಾಗಿ ಧರ್ಮಾತ್ಮರಾದ ಪಾಂಡವರ ನೇತೃತ್ವದಲ್ಲಿ ಏಳು ಅಕ್ಷೋಹಿಣಿಯಿಂದ ಕೂಡಿದ ಸೈನ್ಯಸಾಗರವನ್ನು ಕಂಡು ಭೀತನಾದ ದುರ್ಯೋಧನನು ತನ್ನ ಆಚಾರ್ಯರಾದ ದ್ರೋಣರನ್ನು ಉಪಸತ್ತಿಮಾಡಿ ಈ ಮಾತನ್ನು ಹೇಳುತ್ತಾನೆ. ಎಲೋ! ಆಚಾರ್ಯರೆ, ಪಾಂಡವರ ಮಹತ್ತಾದ ಸೈನ್ಯವನ್ನು ನೋಡಿ. ಆ ಸೇನೆಗೆ ದ್ರುಪದಪುತ್ರನಾದ ಧೃಷ್ಟದ್ಯುಮ್ನ ನಾಯಕನಾಗಿದ್ದಾನೆ. ಬುದ್ಧಿಶಾಲಿಯಾದ ನಿಮ್ಮ ಶಿಷ್ಯನಾದ ದೃಷ್ಟದುಮ್ನನು ನಿಮ್ಮಿಂದಲೇ ಧನುರ್ವಿದ್ಯಾಪಾರಂಗತನೂ ಆಗಿದ್ದಾನೆ. ನಿಮ್ಮ ಸಂಹಾರಕ್ಕಾಗಿಯೇ ನಿಮ್ಮ ಮಿತ್ರನಾದ ದ್ರುಪದನಿಂದ ಯಾಜೋಪಯಾಜರ ಮಂತ್ರದ ಬಲದಿಂದ ಯಜ್ಞದಿಂದ ಹುಟ್ಟಿದವನ್ನಾಗಿದ್ದಾನೆ. ಅಷ್ಟೇ ಅಲ್ಲದೆ ನಿಮ್ಮಲ್ಲಿಯೇ ಧನುರ್ವಿದ್ಯೆಯ ಎಲ್ಲಾ ಪ್ರಕಾರವನ್ನು ಅಭ್ಯಾಸಮಾಡಿ ನಿಮ್ಮನ್ನೇ ಸಂಹರಿಸಲಿಕ್ಕಾಗಿ ವಿರೋಧಿಬಣದ ಸೇನಾನಾಯಕನಾಗಿ ನಿಮ್ಮೆದುರು ಬಂದು ನಿಂತಿದ್ದಾನೆ. ಇಷ್ಟೇ ಅಲ್ಲದೆ ಪಾಂಡವರ ಆ ಸೈನ್ಯರಾಶಿಯಲ್ಲಿ ಸಾತ್ಯಕಿಯೇ ಮೊದಲಾದ ಅನೇಕ ಮಹಾರಥರುಗಳು ಬಂದುಸೇರಿದ್ದಾರೆ. ಹತ್ತು ಸಾವಿರ ಜನರೊಂದಿಗೆ ಯುದ್ಧಮಾಡಲು ಸಮರ್ಥನಾಗಿ ಶಸ್ತ್ರಾಸ್ತ್ರಗಳಲ್ಲಿ ಪ್ರಾವೀಣ್ಯತೆವುಳ್ಳ ವ್ಯಕ್ತಿಯನ್ನು 'ಮಹಾರಥಿ' ಎಂದು ಕರೆಯುತ್ತಾರೆ. ಇಂತಹ ಮಹಾರಥಿಗಳ ಪಡೆಯೇ ನಿಮ್ಮ ಶಿಷ್ಯನಾದ ದೃಷ್ಟದ್ಯುಮ್ನನ ನೇತೃತ್ವದಲ್ಲಿ ಇದೆ. ಇಂತಹ ಭಯಂಕರವಾದ ಪಾಂಡವರ ಸೇನೆಯು ನಮ್ಮನ್ನು ಜಯಿಸಲು ಸಮರ್ಥವಾಗಿದೆ. ಮಹಾಬಲಿಷ್ಠವಾದ ಈ ಸೇನೆಗೆ ಮಹಾಪರಾಕ್ರಮಿಯಾದ ಭೀಮಸೇನನ ರಕ್ಷಾಕವಚವೂ ಇದೆ.

ನಮ್ಮ ಸಹಾಯಕ್ಕೆ ನೀವು, ಭೀಷ್ಮ, ಕರ್ಣ, ಅಶ್ವತ್ಥಾಮ, ಮೊದಲಾದ ಮಹಾನುಭಾವರುಗಳು ಇರುವುದೋನೋ ಸತ್ಯ. ಆದರೆ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ನಿಮಗೆ ಯುದ್ಧಕ್ಕೆ ಬೇಕಾದ ಶೌರ್ಯಾದಿ ಗುಣಗಳು ಇರಲಾರವು. ಬ್ರಾಹ್ಮಣರಾದ ನೀವು ದಯಾಳುಗಳು, ಅಷ್ಟೇ ಅಲ್ಲದೆ ಪಾಂಡವಪಕ್ಷಪಾತಿಗಳೂ ಕೂಡ. ನಿಮ್ಮ ಮಗ ಅಶ್ವತ್ಥಾಮ ಹಾಗೂ ನಿಮ್ಮ ಭಾವ ಕೃಪಾಚಾರ್ಯರು ನಿಮ್ಮನ್ನೇ ಅನುಸರಿಸತಕ್ಕಂತಹವರು. ಭೀಷ್ಮರೋ,

ಆತನನ್ನು ನಂಬಿ ಕೆಟ್ಟವರಿಲ್ಲ.

ಅವರಾದರೂ ವಯೋವೃದ್ಧರು. ಪಾಂಡವರನ್ನು ಸಂಹರಿಸಲಾರೆನು ಎಂಬ ಪ್ರತಿಜ್ಞೆಯನ್ನು ಹೊಂದಿದವರು. ಕರ್ಣನಾದರೂ ಮಹಾಧನುರ್ವಿದ್ಯಾಪಾರಂಗತನಾದರೂ ಗುರುಗಳಾದ ಪರಶುರಾಮರ ಶಾಪದಿಂದಾಗಿ ಸ್ಪರ್ಧೆಯಿಂದ ಯುದ್ಧಮಾಡಿದರೆ ಪರಾಜಿತನಾಗತಕ್ಕವನು. ಸ್ಪರ್ಧೆಯಿಲ್ಲದೆ ಯುದ್ಧ ನಡೆಯದು ಅಷ್ಟೇ ಅಲ್ಲದೆ ಭೀಷ್ಮರ ಸೇನಾಧಿಪತ್ಯದಲ್ಲಿ ಹೋರಾಡೆನು ಎಂಬ ಪ್ರತಿಜ್ಞೆವುಳ್ಳವನು. ಈ ರೀತಿಯಾಗಿ ಮಹಾಪರಾಕ್ರಮಿಗಳ ಪಟ್ಟಿಯೇ ನಮ್ಮಲ್ಲಿದ್ದರೂ ಅವರೆಲ್ಲರೂ ಒಂದೊಂದು ರೀತಿಯಲ್ಲಿ ಯುದ್ಧಮಾಡಲು ಅಸಮರ್ಥರು. ಇನ್ನುಳಿದ ಅನೇಕರು ನಮ್ಮ ಸಹಾಯಕ್ಕಾಗಿ ಬಂದಿದ್ದರೂ ಅವರೆಲ್ಲರು ಒಬ್ಬೊಬ್ಬರಾಗಿ ಯುದ್ಧಮಾಡಲು ಅಸಮರ್ಥರು. ಅವರು ಬಹು ಆಯುಧಗಳನ್ನು ಹೊಂದಿದ್ದರಿಂದಲೇ  ಸ್ವಾಭಾವಿಕವಾದ ಬಾಹುಬಲ ಅವರಿಗೆ ಇಲ್ಲವೆಂದು ತಿಳಿಯುತ್ತದೆ. ನಮಗೋಸ್ಕರ ಪ್ರಾಣಬಿಡಲಿಕ್ಕಾಗಿಯೇ ಅವರು ಬಂದಿರುತ್ತಾರೆ. ಆದ್ದರಿಂದ  ಭೀಮನಿಂದ ರಕ್ಷಿಸಲ್ಪಟ್ಟ ಪರಿಪೂರ್ಣವಾದ ಪಾಂಡವರ ಸೇನೆಯ ಎದುರು ನಮ್ಮ ಸೈನ್ಯವು ಅಪರಿಪೂರ್ಣವಾಗಿದೆ.  ಈ ಕಾರಣದಿಂದ ಬಹಳ ಜಾಗ್ರತೆಯಾಗಿ ನಮ್ಮ ಸೇನಾಧಿಪತಿಯಾದ ಭೀಷ್ಮರನ್ನು ನೀವೆಲ್ಲರೂ ಸೇರಿ ರಕ್ಷಿಸಬೇಕು. ಈ ರೀತಿಯಾಗಿ ಭೀಷ್ಮರಿಗೆ ಕೇಳುವಂತೆ ದ್ರೋಣರಲ್ಲಿ ದುರ್ಯೋಧನನು ತನ್ನ ವಿಷಾದವನ್ನು ವ್ಯಕ್ತಪಡಿಸಿದನು. ಅದನ್ನು ಕೇಳಿ ವ್ಯಗ್ರರಾದ ಭೀಷ್ಮರು ದುರ್ಯೋಧನನನಿಗೆ ಹರ್ಷವಾಗುವುದಕೋಸ್ಕರ ಸಿಂಹನಾದ ಮಾಡುತ್ತಾ ತನ್ನ ಶಂಖವನ್ನು ಊದಿದರು. ಅವರನ್ನು ಅನುಸರಿಸಿ ದುರ್ಯೋಧನನ ಸೈನ್ಯದಲ್ಲಿರುವವರೆಲ್ಲರೂ ಶಂಖ, ಭೇರಿ, ಪಣ, ಆನಕ, ಗೋಮುಖ, ದುಂದುಭಿ, ನಗಾರಿ, ಮೊದಲಾದ ವಾದ್ಯಘೋಷಗಳಿಂದ ದಿಗಂತವ್ಯಾಪ್ತಿಯಾದ ದೊಡ್ಡಶಬ್ದವನ್ನು ಮಾಡಿದರು.

ಶ್ವೇತ ಕುದರೆಗಳಿಂದ ಕೂಡಿದ ಉತ್ತಮವಾದ ರಥದಲ್ಲಿರುವ ಶ್ರೀಕೃಷ್ಣ–ಅರ್ಜುನರು ಕ್ರಮವಾಗಿ ತಮ್ಮ ಪಾಂಚಜನ್ಯ ಮತ್ತು ದೇವದತ್ತವೆಂಬ ಉತ್ತಮವಾದ ಶಂಖವನ್ನು ಊದಿದರು. ಇವರನ್ನು ಅನುಸರಿಸಿ ಭೀಮಸೇನ, ಯುಧಿಷ್ಠಿರ, ನಕುಲ ಸಹದೇವರು ಹಾಗೂ ದೃಷ್ಟದ್ಯುಮ್ನನೇ ಮೊದಲಾದ ಪ್ರಮುಖರು ತಮ್ಮ ತಮ್ಮ ಶಂಖಗಳನ್ನು ಊದಿದರು. ಈ ಧ್ವನಿಯು ದುರ್ಯೋಧನನ ಸೈನ್ಯದ ಹೃದಯ ಭೇದನಮಾಡಿತು.

ಇಲ್ಲಿ ರಥ ಎಂದರೆ ದೇಹ ಎಂದರ್ಥ. ರಥದಲ್ಲಿರುವ ಕೃಷ್ಣಾರ್ಜುನರು ಎಂದರೆ ದೇಹದಲ್ಲಿರತಕ್ಕ ಪರಮಾತ್ಮ ಮತ್ತು ಜೀವಸ್ವರೂಪಭೂತರು. ರಥಕ್ಕೆ ಸ್ಯಂದನ ಎಂದೂ

(40ನೇ ಪುಟದಲ್ಲಿ...)

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹಃ ಕೃಷ್ಣಾ

ವಿದುರನು ಧೃತರಾಷ್ಟ್ರನಿಗೆ ದಾನದ ಬಗ್ಗೆ ತುಂಬಾ ಒತ್ತು ಕೊಡುತ್ತಾ, ಮಾಡ ತಕ್ಕಂತಹ ದಾನ ಹೇಗಿರಬೇಕು– ಎಂದು ವಿವರಿಸುತ್ತಾನೆ. ಮನಸ್ಸೆಂಬುದು ಬಹಳ ಚಂಚಲ. ಆದ್ದರಿಂದ ದಾನವನ್ನು ಅನಿಸಿದ ಕೂಡಲೇ ಮಾಡಬೇಕು. ಕರ್ಣ ತಾನು ಎಡಕೈಯಲ್ಲಿ ಚಿನ್ನದ ಎಣ್ಣೆಯ ಗಿಂಡಿಯನ್ನು ಹಿಡಿದುಕೊಂಡು ಬಲಕೈಗೆ ಹಾಕಿಕೊಂಡು ಅಭ್ಯಂಗ ಮಾಡುತ್ತಿದ್ದನು. ಆಗಲೇ ಯಾರೋ ಒಬ್ಬನು ಬಂದು ಏನಾದರು ಕೊಡು ಎಂದು ಬೇಡಿದ್ದಕ್ಕೆ ಕರ್ಣ ಎಡಕೈಯಲ್ಲಿದ್ದ ಚಿನ್ನದ ಗಿಂಡಿಯನ್ನು ಹಾಗೆ ಕೊಟ್ಟನಂತೆ. ಇದನ್ನು ನೋಡಿದ ಅಕ್ಕಪಕ್ಕದ ಬ್ರಾಹ್ಮಣರು, ಕೊಡುವಂತಹ ಚಿನ್ನದ ಗಿಂಡಿಯನ್ನು ಒಂದು ಸಂಕಲ್ಪ ಮಾಡಿ, ಬಲಕೈಯಲ್ಲಿ ಕೊಡಬಹುದಿತ್ತು ಎಂದು ಹೇಳಿದಾಗ, ಸಂಕಲ್ಪ ದೊಡ್ಡದಾಗಿದ್ದಲ್ಲಿ ಅಥವಾ ಎಡಕೈಯಿಂದ ಬಲಕೈಗೆ ತೆಗೆದುಕೊಳ್ಳುವುದರೊಳಗೆ ಮನಸ್ಸು ಬದಲಾಗಬಹುದೆಂದು ಎಡಕೈಯಲ್ಲಿಯೇ ಕೊಟ್ಟು ಬಿಟ್ಟೆ ಎನ್ನುತ್ತಾನೆ. ಆದ್ದರಿಂದ ಈ ದಿವಸ ನಮ್ಮ ಮನಸ್ಸು, ಬಯಲು ಪ್ರದೇಶದಲ್ಲಿ ಹಚ್ಚಿಟ್ಟ ದೀಪದಂತೆ ಕುಣಿಯುತ್ತಿದೆ. ಧೃತರಾಷ್ಟ್ರ, ನಿನ್ನ ಮನೆಯಲ್ಲಿ ಕೂಡಿ ಹಾಕಿದ ಪಾಂಡವರ ಸಂಪತ್ತನ್ನು ಸ್ವಲ್ಪವಾದರು ದಾನ ಮಾಡಲು ಆರಂಭಿಸು ಎಂದು ಬುದ್ಧಿ ಹೇಳುತ್ತಾನೆ. ಪ್ರಾಯಶಃ ಸಂಪತ್ತು ಹೆಚ್ಚಿದ್ದವನಲ್ಲಿ ದಾನದ ಬುದ್ಧಿಯನ್ನು ನಾವು ಕಡಿಮೆ ಕಾಣಬಹುದು. ಒಬ್ಬ ದೇವಸ್ಥಾನಕ್ಕೆ ಬರುವಾಗ ಅವನ ಜೇಬಿನಲ್ಲಿ ಇದ್ದ ಐದು ರೂಪಾಯಿಯನ್ನು ದೇವರ ಹುಂಡಿಗೆ ಹಾಕಿ ಬಿಡುತ್ತಾನೆ. ಅದೇ ತನ್ನ ಹತ್ತಿರ ತೊಂಬತ್ತ ಐದು ರೂಪಾಯಿ ಇದ್ದಿದ್ದರೆ ಅದನ್ನು ನೂರು ರೂಪಾಯಿ ಮಾಡಿ ಎಲ್ಲಿಯಾದರು ಠೇವಣಿ ಇಟ್ಟು ಬಡ್ಡಿಯಲ್ಲಿ ಚೆನ್ನಾಗಿ ಬದುಕುವ ಲೆಕ್ಕ ಹಾಕುತ್ತಿರುತ್ತಾನೆ. ದುಡ್ಡು ಜಾಸ್ತಿ ಇದ್ದಷ್ಟು ಮನುಷ್ಯನಿಗೆ ಆಸೆ ಜಾಸ್ತಿ. ಅವನ ಹತ್ತಿರ ಕಡಿಮೆ ಇದ್ದಷ್ಟು ದಾನ ಧರ್ಮಬುದ್ಧಿ ಜಾಸ್ತಿ ಬರುತ್ತದೆ ಅಂದ್ರು. ಆದ್ದರಿಂದ ಧೃತರಾಷ್ಟ್ರ, ನಿನ್ನಲ್ಲಿದ್ದ ಸಾಕಷ್ಟು ಸಂಪತ್ತಿನಲ್ಲಿ ಸ್ವಲ್ಪವಾದರೂ ದಾನ ಮಾಡು. ಅದನ್ನು ಒಬ್ಬನೇ ಅನುಭವಿಸಬೇಡ.

**ಏಕಃ ಸ್ವಾದು ನ ಭುಂಜೀತ ಏಕಶ್ಚಾರ್ಥಾನ್ ನ ಚಿಂತಯೇತ್ ।**
**ಏಕೋ ನ ಗಚ್ಛೇದಧ್ವಾನಂ ನೈಕಃ ಸುಪ್ತೇಷು ಜಾಗೃಯಾತ್ ॥**

ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು

ನಾಲ್ಕು ರೀತಿಯಿಂದ ವಿಷಯಗಳನ್ನು ಒಬ್ಬನೇ ಮಾಡಬೇಡ. ಒಳ್ಳೆಯ ವಿಷಯ, ದೇವರ ವಿಷಯ ನಿನಗೆ ಹೊಳೆಯಿತೆಂದಾದರೆ, ಅದನ್ನು ಒಬ್ಬನೇ ಅನುಭವಿಸದೆ ಇನ್ನೊಬ್ಬನಿಗೂ ಹಂಚು. ಹೀಗಾದರೆ ಅದು ನಿನ್ನಲ್ಲಿಯೂ ಗಟ್ಟಿಯಾಗಿ ಉಳಿಯುತ್ತದೆ. ಅವನಿಗೂ ತಿಳಿಯುತ್ತದೆ. ಇಲ್ಲವಾದಲ್ಲಿ ನಾಳೆಯ ದಿನದಂದು ನಿನಗೆ ಮರೆತು ಹೋಗುವಂತ ಪ್ರಸಂಗ ಬಂದು ನಿನಗೂ ಇಲ್ಲ, ಸಮಾಜಕ್ಕೂ ಇಲ್ಲದಂತೆ ಆಗಬಹುದು. ನಾವು ಈ ದಿನ ಕಹಿ ಅನುಭವವನ್ನು ಇನ್ನೊಬ್ಬನಲ್ಲಿ ಹಂಚಿ, ಸಿಹಿಯನ್ನು ಹಂಚುವುದಿಲ್ಲ. ಆದ್ದರಿಂದ ಚಿಕ್ಕ ಮಗುವಿನಲ್ಲಿ ತಿಂಡಿಯನ್ನು ಕೊಟ್ಟು, ಅಣ್ಣನಿಗೂ ಕೊಟ್ಟು ತಿನ್ನು ಎಂದು ಹೇಳುವಂತೆ, ಒಳ್ಳೆಯ ವಿಷಯವನ್ನು ಒಬ್ಬನೇ ಅನುಭವಿಸಬೇಡ ಎಂದು ವಿದುರನು ಎನ್ನುತ್ತಾನೆ.

ಇನ್ನೊಂದು–ದುಡ್ಡನ್ನು ಒಬ್ಬನೇ ಲೆಕ್ಕ ಮಾಡಬೇಡ ಎಂದು ಎಚ್ಚರಿಕೆ ಕೊಡುತ್ತಾನೆ. ಒಬ್ಬನು ಸಂಬಳ ಬಂದ ದಿನದಿಂದ ದಿನಾಲು ಲೆಕ್ಕ ಮಾಡುವುದು. ತಿಜೋರಿಯಲ್ಲಿ ಇಡುವುದನ್ನು ಮಾಡುತ್ತಿದ್ದನು. ಇದನ್ನು ಅರಿಯದ ಅವನ ಹೆಂಡತಿ.ಒಂದು ದಿನ ಅವನಲ್ಲಿ ಕೇಳಿ ತಿಳಿದುಕೊಂಡಳು. ತದನಂತರ ಇಬ್ಬರೂ ಸೇರಿ ಲೆಕ್ಕವನ್ನು ಮಾಡಿ ಜೋಡಿಸಿ ಇಡುತ್ತಿದ್ದರು. ಮೂರು ದಿನಗಳ ನಂತರ ಲೆಕ್ಕ ಮಾಡಿ ಬೇಸತ್ತು, ಹೆಂಡತಿಯು ಅದನ್ನು ತಿಜೋರಿಯಲ್ಲಿ ಸುಮ್ಮನೆ ಇಡುವುದಕ್ಕಿಂತ ಸ್ವಲ್ಪ ದಾನ ಮಾಡಬಹುದು ಎಂಬ ವಿಚಾರವನ್ನು ಮುಂದಿಟ್ಟಳು. ಇದನ್ನು ಒಪ್ಪಿದ ಗಂಡನು ನಾಲ್ಕು ಬ್ರಾಹ್ಮಣರನ್ನು ಕರೆದು ದಕ್ಷಿಣೆ ಕೊಟ್ಟನು. ಒಬ್ಬನೇ ದುಡ್ಡು ಲೆಕ್ಕ ಮಾಡುತ್ತಿದ್ದಾಗ ದಾನ ಮಾಡುವ ಬುದ್ಧಿ ಬರದೆ, ಹೆಂಡತಿಯು ಸ್ವಲ್ಪ ಧ್ವನಿ ಸೇರಿಸಿದರಿಂದ ಒಳ್ಳೆಯ ಕಾರ್ಯ ನಡೆಯಿತು. ಅದಕ್ಕೆ ಧೃತರಾಷ್ಟ್ರನಿಗೆ ವಿದುರನು ಒಬ್ಬನೆ ದುಡ್ಡು ಲೆಕ್ಕ ಮಾಡುವ ಪ್ರಸಂಗವನ್ನು ಜೀವನದಲ್ಲಿ ತಂದು ಕೊಳ್ಳಬೇಡ ಎನ್ನುತ್ತಾನೆ.

ಸಮಾಜದಲ್ಲಿ ಸ್ತ್ರೀಯರಿಗೆ ತುಂಬಾ ಪ್ರಾಶಸ್ತ್ಯ ಕೊಡಬೇಕು ಎಂದು ಹೇಳುತ್ತಾರೆ. ಒಂದು ಹೆಣ್ಣು ಮಗಳ ಉದ್ಧಾರವಾದರೆ ಅವಳ ಮನೆಯ ಉದ್ಧಾರವಾದಂತೆ. ಅವಳಿಗೆ ಅವಮಾನವಾದರೆ ಕೇಡು ಖಂಡಿತ. ಶ್ರೀಕೃಷ್ಣ ಪರಮಾತ್ಮನು ಇಂತಹ ಸ್ತ್ರೀ ನಿಂದಕರನ್ನು ಬಡಿದುರುಳಿಸಲು ಧರೆಗೆ ಬಂದನು. ತನ್ನ ಭಾವಂದಿರು ಅಥವಾ ಪ್ರತಿದಿನ ಉಪದೇಶ ಮಾಡುವ ಆಚಾರ್ಯ ಸ್ಥಾನದಲ್ಲಿರುವವರನ್ನೂ ತಾನು ಬಿಡಲಿಲ್ಲ. ಭೀಷ್ಮ, ದ್ರೋಣ, ಕೃಪಾಚಾರ್ಯರು, ಸ್ವಯಂಭಾವನಾದ ದುರ್ಯೋಧನ, ಮಾವನ ಸ್ಥಾನದಲ್ಲಿದ್ದ

(24ನೇ ಪುಟದಲ್ಲಿ.......)

**ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.**

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ

ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಹಂಸ, ಳ, ಕ್ಷ ಕಾರಕ್ಕೆ ನೃಸಿಂಹ (ನರ+ಸಿಂಹ) ಸಂಯುಕ್ತರೂಪ. ಈ ಐವತ್ತೊಂದು ವರ್ಣ ಐವತ್ತೊಂದು ರೂಪಗಳನ್ನು ಹೇಳುತ್ತವೆ. ಆಯಾರೂಪಗಳು ಆಯಾ ವರ್ಣಗಳ ವಾಚ್ಯವಾಗಿರುತ್ತವೆ. ಇಷ್ಟರವರೆಗೆ ಕೇವಲ ವರ್ಣದ ಬಗ್ಗೆ ತಿಳಿದುಕೊಂಡ ಹಾಗೆ ಆಯಿತು. ನಂತರ ಸ್ವರಗಳನ್ನು ತಿಳಿದುಕೊಳ್ಳಬೇಕು ಎಂದು ಹೇಳುತ್ತಾರೆ. ಅ ಕಾರದಿಂದ ಅಃ ಕಾರದವರೆಗೆ ಇರುವ ಅಕ್ಷರಗಳು ಮಾತ್ರ ಸ್ವರಗಳೆಂದು ತಿಳಿಯಬೇಡಿ. ಇನ್ನೂ ಅನೇಕ ಸ್ವರಗಳಿವೆ. ಸಂತೋಷ ಸೂಚಿಸಲಿಕ್ಕೆ ಇರುವ ಸ್ವರವೇ ಬೇರೆ. ಕಷ್ಟ, ದುಃಖ, ಸಂಶಯ, ಪ್ರಶ್ನೆ ಆಶ್ಚರ್ಯ ಸೂಚಿಸುವ ಸ್ವರಗಳೇ ಬೇರೆ ಬೇರೆ ರೀತಿ ಇವೆ. ಒಂದೇ ಶಬ್ದಕ್ಕೆ ಬೇರೆ ಬೇರೆ ಸ್ವರದ ಕಾರಣ ಬೇರೆ ಬೇರೆ ಅರ್ಥಗಳು ಬರುತ್ತವೆ. ಸ್ವರದ ಪರಿಜ್ಞಾನ ಇಲ್ಲದಿದ್ದರೆ ಮಾತಾಡಲು ಸಾಧ್ಯ ಇಲ್ಲ. ಏನು ಆ ಕೆರೆಯಲ್ಲಿ ನೀರು ತುಂಬಿದೆ, ಅದರಲ್ಲಿ ಸ್ನಾನ ಮಾಡಬೇಕಾದರೆ ಹೊರಳಾಡಬೇಕು. ಹೀಗೆ ಹೇಳಿದರೆ ಅದರಲ್ಲಿ ನೀರೇ ಇಲ್ಲ ಎಂದು ಅರ್ಥ ಬರುತ್ತದೆ. ವೇದದ ಸ್ವರಗಳನ್ನು ತಿಳಿದುಕೊಳ್ಳಬೇಕು. ಉದಾತ್ತ ಅನುದಾತ್ತಗಳನ್ನು ತಿಳಿದುಕೊಳ್ಳಬೇಕು. ಕುತ್ತಿಗೆಯಿಂದ ಮೇಲೆ pressure ಹಾಕಿ ಶಬ್ದವನ್ನು ಉಚ್ಚರಿಸಿದರೆ ಉದಾತ್ತ ಎನಿಸುತ್ತದೆ. ಕೆಳಗೆ pressure ಹಾಕಿ ಹೇಳಿದರೆ ಅನುದಾತ್ತ ಎನಿಸುತ್ತದೆ. ಒಂದು ಶಬ್ದದಲ್ಲಿ ಒಂದು ಉದಾತ್ತ ಇದ್ದರೆ ಉಳಿದುದೆಲ್ಲ ಅನುದಾತ್ತ. ಶಬ್ದದಲ್ಲಿ ಮೊದಲು, ಮಧ್ಯ ಅಥವಾ ಕೊನೆಯಲ್ಲಿ ಈ ಉದಾತ್ತ ಬರುತ್ತದೆ. ಇದಕ್ಕೆ ಕ್ರಮವಾಗಿ ಆದ್ಯೋದಾತ್ತ, ಮಧ್ಯೋದಾತ್ತ ಹಾಗೂ ಅಂತ್ಯೋದಾತ್ತ ಎಂದು ಹೆಸರು. ಉದಾತ್ತದ ನಂತರ ಅನುದಾತ್ತ ಸ್ವರ. ಇದರ ನಂತರ ಸ್ವರಿತ ಸ್ವರ. ಸ್ವರಿತದ ನಂತರ ಪ್ರಚಯ ಸ್ವರ. ಸ್ವರಿತವನ್ನು ಸಮಾಹಾರಕ ಎಂದು ಸಹ ಕರೆಯುತ್ತಾರೆ. ಅಗ್ನಿಮೀಽಳೆ.....ಎಂಬಲ್ಲಿ 'ಮೀ' ಎಂಬುದು ಸ್ವರಿತ ಸ್ವರದಲ್ಲಿ ಹೇಳಬೇಕು ನಂತರ ಪ್ರಚಯ ಸ್ಥಿತಿಯಲ್ಲಿಯ ಸ್ವರವನ್ನು ಹೇಳಬೇಕು. ಅಂದರೆ ಯಥಾಸ್ಥಿತಿಯನ್ನು ಹೇಳಬೇಕು. ಮೊದಲು ಎರಡು ಸ್ವರವನ್ನು ಹೇಳಿದರು. ಈಗ ಸ್ವರಿತ ಹಾಗೂ ಪ್ರಚಯವನ್ನು ಸೇರಿಸಿ ನಾಲ್ಕು ಆಯಿತು. ಈಗ ಏಳು ಸ್ವರಗಳಿವೆ ಎಂದು ಹೇಳುತ್ತಾರೆ. ಉದಾತ್ತದ ನಂತರ

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

ಉದಾತ್ತತರ ಇದ್ದ ಹಾಗೆ ಅನುದಾತ್ತದ ನಂತರ ಅನುದಾತ್ತತರ ಎಂಬ ಸ್ವರಗಳಿವೆ. ಹೀಗೆ ಆರು ನಂತರ ಕಂಪ ಇದು ಸ್ವರಿತದ ನಂತರ ಬರುವಂಥಾದ್ದು. ಹೀಗೆ ಏಳು ಸ್ವರಗಳನ್ನು ಹೇಳಿದ್ದಾರೆ. ಸ್ವರಗಳ ಅರ್ಥಗಳನ್ನು ತಿಳಿದುಕೊಳ್ಳಬೇಕು. ಉದಾತ್ತ ಉಚ್ಚತ್ವವನ್ನು ಹೇಳಿದರೆ ಅನುದಾತ್ತ stress ದಾರ್ಢ್ಯವನ್ನು ಹೇಳುತ್ತದೆ. ಸ್ವರಿತ ನೀಚತ್ವವನ್ನು ಹಾಗೂ ಪ್ರಚಯ ಯಥಾಸ್ಥಿತಿಯನ್ನು ಹೇಳುತ್ತದೆ. ಶಂನೋ ಎಂದರೆ ಉಚ್ಚವಾದ ಸುಖ-ಮಂಗಳವನ್ನು ನಮಗೆ ಕೊಡಲಿ ಎಂದು ಅರ್ಥ. 'ನೋ' ಎಂಬುದು ಸ್ವರಿತದಲ್ಲಿ ಇದೆ. ಆದ್ದರಿಂದ ನೋ ಎಂಬುದು ನೀಚತ್ವವನ್ನು ಹೇಳುತ್ತದೆ. ನಃ ಎಂದರೆ ನಮಗೆ. ನಾವು ಅವನಿಂದ ಎಷ್ಟು ಕೆಳಗಿನವರು ಎಂದು ಇದು ತಿಳಿಸುತ್ತದೆ. ಮಿತ್ರಃ ಎಂದರೆ to know, to protect. ಮಿ ಎಂಬುದು ಅನುದಾತ್ತದಲ್ಲಿ ಇದೆ. ಜ್ಞಾನದಲ್ಲಿ ದೃಢತೆ ಇದೆ. ತ್ರಃ ಎಂದರೆ ಜ್ಞಾನದಲ್ಲಿ ದೃಢತೆಯನ್ನು ಕೊಟ್ಟು ಉನ್ನತವಾದ ರಕ್ಷಣೆಯನ್ನು ಕೊಡುವವ ಎಂದು ಅರ್ಥ. ವರುಣಃ ಇದರಲ್ಲಿ ಉದಾತ್ತ ಸ್ವರಿತ ಹಾಗೂ ಪ್ರಚಯ ಸ್ವರಗಳಿವೆ. ಆವೃಣೋತೀತಿ ವರುಣಃ ವರುಣ ಕತ್ತಲೆಯಿಂದ ಜಗತ್ತನ್ನು ಆವರಿಸುತ್ತಾನೆ. ಉಚ್ಚ ನೀಚ ಯಥಾಸ್ಥಿತಿಯನ್ನು ಹೇಗೆ ಹೇಳುತ್ತದೆ. ಎಲ್ಲರಿಗೂ ಬೇಕಾದ ಜ್ಞಾನ ಹಾಗೂ ಅಜ್ಞಾನಗಳನ್ನು ಕೊಟ್ಟು ತಾನು ಯಥಾಸ್ಥಿತಿಯಲ್ಲಿ ಇರುತ್ತಾನೆ. ಕಂಪಕ್ಕೆ ಏನು ಅರ್ಥ? ನಾವು ಹೇಳಿಕೆ ಕೊಡಲಿಕ್ಕೆ ಹೋಗುವಾಗ ನೀವು ಎಲ್ಲರೂs ಬರಬೇಕು ಎಂದು ರಾಗ ಎಳೆದು ಹೇಳುತ್ತೇವೆ. ಅಂದರೆ ಎಲ್ಲವನ್ನು ಪರಿಗ್ರಹಣ ಮಾಡುವುದು. ಇನ್ನೊಂದು ಅರ್ಥ ಲಜ್ಜೆ. ಗಂಡ ಹೆಂಡತಿಗೆ ವಾಕಿಂಗ್‌ಗೆ ಹೋಗುವ ಎಂದು ಹೇಳುತ್ತಾನೆ. ಆಗ ಹೆಂಡತಿ ಲಜ್ಜೆಯಿಂದ ಹೋssssಗಿ ನಾನು ಬರುವುದಿಲ್ಲ ಎಂದು ರಾಗ ಎಳೆದು ಲಜ್ಜೆಪಟ್ಟುಕೊಂಡು ಹೇಳುತ್ತಾಳೆ. ಸಾಮವೇದದಲ್ಲಿರುವ ಸ್ವರಗಳು ಬೇರೆ ಇವೆ. ಕೃಷ್ಟ, ಪ್ರಥಮ, ದ್ವಿತೀಯ, ತೃತೀಯ, ಚತುರ್ಥ, ಮಂದ್ರ ಹಾಗೂ ಅತಿಸ್ವರ್ಯ. ಅಲ್ಲದೆ ಇದರಲ್ಲೆ 21 ಬೇರೆ ಸ್ವರಗಳಿವೆ. ಇದರಲ್ಲಿ ಈಗ ಕೇವಲ ದ್ವಿತೀಯ, ತೃತೀಯ, ಚತುರ್ಥ ಹಾಗೂ ಮಂದ್ರ ಸ್ವರಗಳು ಮಾತ್ರ ಉಳಿದಿವೆ. ಉದಾತ್ತ, ಅನುದಾತ್ತ, ಸ್ವರಿತ ಪ್ರಚಯ ಇದ್ದ ಹಾಗೆ ಇವು ಸಹ ಇವೆ. ಮೇಲೆ ಹೇಳಿದ ಏಳು ಸ್ವರಗಳನ್ನು ಮಧ್ಯ, ವಿಲಂಬಿತ ಹಾಗೂ ದೃತ ಸ್ವರಗಳೆಂದು ಮೂರು ರೀತಿಯಲ್ಲಿ ಪ್ರತಿಯೊಂದನ್ನು ಹೇಳಬಹುದು. ಹೀಗೆ ಇಪ್ಪತ್ತೊಂದು ಸ್ವರಗಳಿವೆ. ತಾನು ಕಲಿತದ್ದನ್ನು ಪಾರಾಯಣ ಮಾಡುವಾಗ speed ನಲ್ಲಿ ಹೇಳಬೇಕು. ಇನ್ನೊಬ್ಬರಿಗೆ ಹೇಳುವಾಗ ಅಥವಾ ಯಜ್ಞಯಾಗಾದಿಗಳನ್ನು ಮಾಡುವಾಗ ಸ್ವಲ್ಪ speed ಕಮ್ಮಿ (ಮದ್ಯ) ಮಾಡಿ ಹೇಳಬೇಕು. ನಂತರ ಶಿಷ್ಯರಿಗೆ ಪಾಠ ಹೇಳುವಾಗ ಬಹಳ ಮೆಲ್ಲ ಹೇಳಬೇಕು.

**(ಸಶೇಷ)**

**ಪ್ರತಿದಿನ ಆತನನ್ನು ಪೂಜಿಸಬೇಕು**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಎತ್ತಿದೆನು ನಾನಾ ಶರೀರವ**
**ಹೊತ್ತು ಹೊತ್ತಲೆಸಿದೆನು ಸಲೆ ಬೇ**
**ಸತ್ತ ನಿನ್ನಯ ಪದವ ಕಾಣದೆ ತೊಳಲಿ ಬಳಲಿದೆನು ।**
**ಸತ್ತು ಹುಟ್ಟುವ ಹುಟ್ಟಿ ಹಿಂಗುವ**
**ಸುತ್ತ ತೊಡಕನು ಮಾಣಿಸೆಲೆ ಪುರು**
**ಷೋತ್ತಮನೆ ಮನ ಒಲಿದು ರಕ್ಷಿಸು ನಮ್ಮನನವರತ ॥೬೦॥**

ನಾನು ನಾನಾ ಜನ್ಮಗಳನ್ನೆತ್ತಿದ್ದೇನೆ. ಶರೀರಗಳನ್ನು ಹೊತ್ತು ಹೊತ್ತು ನನ್ನನ್ನು ನಾನೇ ಅಲೆಸಿದ್ದೇನೆ. ಬಹಳ ಬೇಸತ್ತಿದ್ದೇನೆ. ನಿನ್ನ ಸ್ವರೂಪವನ್ನು ಕಾಣದೆ ತೊಳಲಿ ಬಳಲುತ್ತಿದ್ದೇನೆ. ಸತ್ತು ಹುಟ್ಟುವುದು, ಹುಟ್ಟಿ ನಾನಾ ಬಗೆಯಿಂದ ಭಂಗಪಡುವುದು ಇಂಥತೊಡಕುಗಳು ನನ್ನನ್ನು ಸುತ್ತುತ್ತಿವೆ, ಅದನ್ನು, ಎಲೆ ಪುರುಷೋತ್ತಮನೆ, ನೀನೆ ದೂರ ಮಾಡು. ಮನ ಒಲಿದು ನಮ್ಮನ್ನು ಸದಾ ಕಾಪಾಡು.

## ಎತ್ತಿದೆನು ನಾನಾ ಶರೀರವ

'ಎಲೆ ಪುರುಷೋತ್ತಮನೆ, ಮನ ಒಲಿದು ರಕ್ಷಿಸು' ಎನ್ನುವ ಮೂಲಕ ಭಗವದ್ಗೀತೆಯ ಪುರುಷೋತ್ತಮಯೋಗಾಧ್ಯಾಯವನ್ನು ದಾಸರು ನೆನಪಿಗೆ ತಂದುಕೊಳ್ಳುತ್ತಾರೆ.

**ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ**
**ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ।**

'ಹರಿ ಜೀವಶರೀರವನ್ನು ಪ್ರವೇಶಿಸುವಾಗ ಅವನೊಂದಿಗೆ ಜೀವ ತನ್ನ ಇಂದ್ರಿಯಗಳ ಸೂಕ್ಷ್ಮಾಂಶಗಳೊಂದಿಗೆ ಆ ಶರೀರವನ್ನು ಪ್ರವೇಶಿಸುತ್ತಾನೆ. ಹರಿ ಹೊರಗೆ ಹೋಗುವಾಗ ಅವನೊಂದಿಗೆ ಹೊರಗೆ ಬೇರೆ ಲೋಕಗಳಿಗೆ ಹೋಗುತ್ತಾನೆ.' ಹರಿಗೆ ಇದೊಂದು ಲೀಲೆ. ಅವನಿಗೆ ಆರಾಮ, ಜೀವನಿಗೆ ಶ್ರಮ. ಬೆಕ್ಕಿಗೆ ಆಟ, ಇಲಿಗೆ ಪ್ರಾಣಸಂಕಟ. ಅಂತೂ ನಾನಾ ಜನ್ಮಗಳನ್ನೆತ್ತಿದ್ದೇನೆ ನಾನು.

## ಶರೀರವನ ಹೊತ್ತು ಹೊತ್ತಲೆಸಿದೆನು

ಶರೀರವನ್ನು ನಿಜವಾಗಿ ಹೊತ್ತವನು ಹರಿಯೆ. ನನಗೆಲ್ಲಿಯ ಸಾಮರ್ಥ್ಯ? ಆದರೂ

ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.

ಹೊತ್ತು ಹೊತ್ತು, ಅಂದರೆ, **'ಹೊರುತ್ತಿದ್ದೇನೆ'** ಎಂಬ ಭ್ರಮೆಯಲ್ಲಿಯೇ ನನ್ನನ್ನು ನಾನೇ ಬೇಕಾದಷ್ಟು ಅಲೆಸಿದ್ದೇನೆ. ನಾನೇ ಶರೀರವ ಹೊರುತ್ತಿದ್ದೇನೆ ಅಲೆಯುತ್ತಿದ್ದೇನೆ ಎನ್ನುವ ಭ್ರಮದಿಂದಲೇ ನನಗೆ ಶ್ರಮ. ಶ್ರಮವಾಗುವುದರಿಂದಲೇ ಅಲೆಯುತ್ತಿದ್ದೇನೆ ಎನ್ನುವ ಭ್ರಮೆ. ವಸ್ತುತಃ ಜೀವ ಶರೀರವನ್ನು ಹೊರುವವನು ಜೀವನಾಮಕ ಅನಿರುದ್ಧ. **'ಜೀವ ಇತಿ ಭಗವತೋಽನಿರುದ್ಧಸ್ಯನಾಮ'**

ಜೀವ ಅಲೆಯುವುದನ್ನು ಛಾಂದೋಗ್ಯೋಪನಿಷತ್ತಿನಲ್ಲಿ ವರ್ಣಿಸಲಾಗಿದೆ.

**ದಿಶಂ ದಿಶಂ ಪತಿತ್ವಾಽನ್ಯತ್ರಾಯತನಮಲಭ್ಧ್ವಾ**
**ಬಂಧನಮೇವೋಪಾಶ್ರಯತೇ ।**

ಬೇಡ ಒಂದು ಹಕ್ಕಿಯನ್ನು ಹಿಡಿದು ಅದರ ಕಾಲಿಗೆ ಒಂದು ಹಗ್ಗ ಕಟ್ಟಿ ಹಿಡಿದುಕೊಂಡಿರುತ್ತಾನೆ. ಹಕ್ಕಿ ಏನೂ ತಿಳಿಯದೆ ದಿಕ್ಕು ದಿಕ್ಕುಗಳಿಗೆ ಹಾರಿ ಸೋತು ಬೇಡನ ಕೈಗೇ ಬರುತ್ತದೆ. ಹಾಗೇ ಜೀವನೂ ಅನಾದಿಕಾಲದಿಂದ ಹರಿಯ ಬಂಧಕಮಾಯೆಯ ಕಟ್ಟಿನಲ್ಲಿ ಸಿಲುಕಿದ್ದು ನಾನಾ ಶರೀರಗಳನ್ನೆತ್ತಿ ಅವನ್ನು ಹೊತ್ತು ಹೊತ್ತು ಎಲ್ಲ ಲೋಕಗಳಲ್ಲಿ ತಿರುಗಿ ತಿರುಗಿ ಸೋತು ಬೇಸತ್ತು ಶಾಶ್ವತ ಸುಖ ನೀಡುವ ಹರಿಯ ಪಾದವನ್ನೇ ಸೇರುತ್ತಾನೆ.

ಭಗವದ್ಗೀತೆಯ ಪುರುಷೋತ್ತಮ ಯೋಗಾಧ್ಯಾಯದಲ್ಲಿ **'ಊರ್ಧ್ವಮೂಲಮಧಃಶಾಖಂ'** ಎಂದು ಜಗತ್ತನ್ನು ಅಶ್ವತ್ಥವೃಕ್ಷಕ್ಕೆ ಹೋಲಿಸಲಾಗಿದೆ. ಈ ವೃಕ್ಷದ ಕೊಂಬೆಗಳು ಮಹದಾದಿ ತತ್ವಗಳು ಅವುಗಳಿಂದಾದ ವಿಷಯ ಪದಾರ್ಥಗಳು ಎಳೆಯ ಚಿಗುರೆಲೆಗಳು. ನೋಡಲು ಅವು ಸುಂದರ. ತಿಂದರೆ ಕಹಿ, ಒಗರು–

**ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ ಃ**
**ಗುಣಪ್ರವೃದ್ಧಾ ವಿಷಯಪ್ರವಾಲಾಃ ॥**

ಈ ವೃಕ್ಷದ ಎಲೆಗಳೇ ವೇದಗಳು. ವೇದಗಳು ಶಾಶ್ವತ ಸುಖಕ್ಕೆ ಕಾರಣವಾಗುತ್ತವೆ. ಮುಕ್ತಿ ಎಂಬ ಸವಿಯಾದ ಫಲ ನೀಡುತ್ತವೆ. ಆದರೆ ಜೀವ ಕೇವಲ ಚಿಗುರೆಲೆಗಳನ್ನೇ ತಿನ್ನುತ್ತಾನೆ. ಅದಕ್ಕೇ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ಹಾರಿ ಶ್ರಮಪಡುತ್ತಾನೆ. ನಾನಾ ಶರೀರವೆತ್ತಿ ಹೊತ್ತು ಹೊತ್ತು ಅಲೆಯುತ್ತಾನೆ. ಕೊನೆಗೆ ಬೇಸತ್ತು ಶಾಶ್ವತವಾದ ಮುಕ್ತಿ ಫಲಕ್ಕಾಗಿ ಪುರುಷೋತ್ತಮನನ್ನೇ ಮೊರೆಹೋಗುತ್ತಾನೆ.

**ತಮೇವ ಚಾದ್ಯಂ ಪುರುಷಂ ಪ್ರಪದ್ಯೇ**
**ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥**

**ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.**

## ನಿನ್ನಯ ಪದವಕಾಣದೆ ತೊಳಲಿ ಬಳಲಿದೆನು

**ಉತ್ಕ್ರಾಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಂ ।**

**ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ ॥**

ಜೀವನಮರಣಕಾಲದಲ್ಲಿ ಜೀವ ತಾನಾಗಿ ಶರೀರದಿಂದ ಹೊರಗೆ ಹೋಗುವುದಿಲ್ಲ. ಹರಿಯೇ ಜೀವನನ್ನು ಸೆಳೆದುಕೊಂಡು ಹೊರಗೆ ಹೋಗುತ್ತಾನೆ. ಯಮದೂತರು ಸೆಳೆಯುತ್ತಿದ್ದಾರೆ ಎಂದು ಜೀವ ಭ್ರಮಿಸುತ್ತಾನೆ. ಇದೇ ರೀತಿ ಜೀವಶರೀರದಲ್ಲಿ ಹರಿ ಇದ್ದು ಶುಭಫಲರಸವನ್ನು ಉಣ್ಣುವುದನ್ನೂ ಜೀವ ಕಾಣಲಾರ. ಜ್ಞಾನದ ಒಳಗಣ್ಣು ಇರುವವರು ಮಾತ್ರ ಕಾಣಬಲ್ಲರು. ಹೀಗಾಗಿ ಜೀವ ಪರಮಾತ್ಮನ ಸ್ವರೂಪವನ್ನು ಕಾಣದೆ ತೊಳಲಿ ಬಳಲುತ್ತಾನೆ.

## ಸತ್ತು ಹುಟ್ಟುವ ಹುಟ್ಟಿ ಹಿಂಗುವ ಸುತ್ತ ತೊಡಕನು ಮಾಣಿಸು

ಜನನ ಮರಣಗಳ ಚಕ್ರದಲ್ಲಿ ಸುತ್ತಲೂ ಸುತ್ತಿಕೊಳ್ಳುವ ಚುಚ್ಚುವ ತೊಡಕುಗಳನ್ನು ಪರಿಹರಿಸು.

**ಏತದ್ ಬುಧ್ವಾ ಬುದ್ಧಿ ಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ।**

ಸತ್ತು ಹುಟ್ಟುವ ಕ್ಷರ ಪುರುಷರಿಗಿಂತ ಮೇಲೆ, ಮೇಲೆನಿಸಿದ ಲಕ್ಷ್ಮಿಗಿಂತಲೂ ಮೇಲೆ, ಉತ್ತಮನಾಗಿ ಪುರುಷೋತ್ತಮನಾಗಿರುವವನು ಶ್ರೀಹರಿ. ಹಾಗೆ ಅವನನ್ನು ತಿಳಿದು ಭಜಿಸಿದರೆ ಅವನು ಸುತ್ತಲೂ ಬರುವ ತೊಡಕುಗಳನ್ನು
ಪರಿಹರಿಸುತ್ತಾನೆ. **'ತಂ ಯಥಾಯಥೋಪಾಸತೇ ತಥೈವ ಭವತಿ'** ಹರಿಯನ್ನು ಆತ ಸತ್ತು ಹುಟ್ಟುವುದಿಲ್ಲ ಜನನ ಮರಣ ರಹಿತ ಎಂದು ಉಪಾಸನೆ ಮಾಡಿದರೆ, ಉಪಾಸಕನು ಹಾಗೇ ಜನನ ಮರಣಗಳಿಂದ ಮುಕ್ತನಾಗುತ್ತಾನೆ. ಎಲ್ಲ ತೊಡಕುಗಳಿಂದ ದೂರವಾಗುತ್ತಾನೆ. ಆಗಲೆ ಅವನು ಕೃತಕೃತ್ಯನೆನಿಸುತ್ತಾನೆ.

## ಎಲೆ ಪುರುಷೋತ್ತಮನೆ, ಒಲಿದು ರಕ್ಷಿಸುನಮ್ಮನನವರತ

**ಮಚ್ಚಿತ್ತಃ ಸರ್ವದುರ್ಗಾಣಿ ಮತ್ ಪ್ರಸಾದಾತ್ ತರಿಷ್ಯಸಿ ।**

'ನನ್ನಲ್ಲೇ ಮನಸ್ಸಿಡು. ಆಗ ಎಲ್ಲ ತೊಡಕುಗಳಿಂದಲೂ ನನ್ನ ಅನುಗ್ರಹದಿಂದ ಮುಕ್ತನಾಗುವಿ' ಎಂದು ಪುರುಷೋತ್ತಮ ಹರಿ ಒಲಿದು ಪ್ರೀತಿಯಿಂದ ಹರಿದಾಸರಿಗೆ ಆಶ್ವಾಸನೆ ನೀಡಿದ್ದಾನೆ. ಅದರಿಂದ 'ಎಲೆ ಪುರುಷೋತ್ತಮನೆ, ನೀನು ನೀನಾಗಿ ಒಲಿದು, ನಿನ್ನನ್ನು ಒಲಿಸಿಕೊಳ್ಳಲು ಶಕ್ತನಲ್ಲದ ನನಗೊಲಿದು, ಪ್ರೀತಿಯಿಂದ ನಿನ್ನಲ್ಲೇ ಮನವಿಡುವಂತೆ ಶಕ್ತಿ ನೀಡು, ಒಲಿದು ಎಲ್ಲ ಕಷ್ಟಗಳಿಂದ ಪಾರು ಮಾಡು, ಸದಾ ಕಾಪಾಡು' ಎನ್ನುತ್ತಾರೆ ದಾಸರು. ★

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.

# ಹಿರಿಯರ ಹಿತಾಸಕ್ತಿಯನ್ನು ಗಮನಿಸಬೇಕು

-ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಜರತ್ಕಾರು ಎಂಬ ಊರ್ಧ್ವರೇತಸ್ಕ ಮುನಿಯೊಬ್ಬರಿದ್ದರು. ತರುಣ ಮುನಿ ಜರತ್ಕಾರು ಒಮ್ಮೆ ಸಂಚಾರ ಮಾಡುತ್ತಿದ್ದರು. ಸಾಯಂಕಾಲ ಯಾವ ಊರು ಸಿಗುವುದೋ ಅಂದು ಅಲ್ಲೆ ಮೊಕ್ಕಾಂ. ವಾಯುಭಕ್ಷನಾಗಿ ದೇಹ ಶೋಷಣೆಗೈಯ್ಯುತ್ತ ಪೃಥಿಯನ್ನೆಲ್ಲ ಅಲೆಯುತ್ತಿದ್ದಾಗ ಒಂದು ವಿಸ್ಮಯಕಾರಿ ದೃಶ್ಯವನ್ನು ಕಂಡರು.

ಅದೊಂದು ದೊಡ್ಡ ಹಳ್ಳ! ಮೇಲಿಂದ ಇಳಿಬಿದ್ದ ಹುಲ್ಲಿನ ಹಗ್ಗ. ಅದರಲ್ಲಿ ತಲೆಕೆಳಗಾಗಿ ನೇತಾಡುತ್ತಿರುವ ತನ್ನ ಪಿತಾಮಹರು! ಹಳ್ಳದಲ್ಲೇ ನಿತ್ಯವಾಸಮಾಡುವ ಇಲಿಯೊಂದು ಆ ಹುಲ್ಲಿನ ಹಗ್ಗವನ್ನು ಕಚ್ಚಿ ಕಡಿದು ಹಾಕುತ್ತಿದೆ! ಅದನ್ನು ಕಂಡ ಜರತ್ಕಾರು ಅಚ್ಚರಿಗೊಂಡು ಕುತೂಹಲ ಕೆರಳಿ ತಾವು ಯಾರು? ಏಕೀ ದುರವಸ್ಥೇ? ಅಪಾಯದ ಹಳ್ಳ. ಓಲಾಡುವ ಹುಲ್ಲಿನ ಹಗ್ಗ. ಇಲಿಯಿಂದ ಅದರ ಕಡಿತ. ತಲೆಕೆಳಗಾಗಿ ನೇತಾಡುವ ತಾವು ಏನಿದು?! ಎಂದು ಕೇಳಿದ.

ನೊಂದ ಮನದ ಪಿತಾಮಹರು ಪಿಸುಗುಟ್ಟಿದರು. ಗ್ರಾಮೈಕರಾತ್ರವಾಸಿಗಳಾದ ಯಾಯಾವರರಾದ ಋಷಿಗಳು ನಾವು. ಈ ಹುಲ್ಲಿನ ಹಗ್ಗದಂತೆ ನಮ್ಮ ಸಂತತಿಯ ಬಳ್ಳಿ ತುಂಡಾಗುವ ಹಂತದಲ್ಲಿದೆ. ನಮ್ಮ ವಂಶದವನಾದ ಜರತ್ಕಾರು ಎಂಬೊಬ್ಬನೇ ಉಳಿದಿರುವನು. ಅವನಿಗೆ ವಂಶವಿಚ್ಛೇದದ ಯೋಚನೆಯಿಲ್ಲ. ನಾವು ಅಧಃಪತಿತರಾಗುವೆವೆಂಬ ಯೋಚನೆಯಿಲ್ಲ. ತಪಸ್ಸಿನ ಹುಚ್ಚಾಟಕ್ಕೆ ಸಿಲುಕಿ ಅಲೆಯುತ್ತಿದ್ದಾನೆ. ಮದುವೆಯಾಗುವುದಿಲ್ಲ. ಮಕ್ಕಳನ್ನು ಪಡೆಯುವುದಿಲ್ಲ ಎಂದು ನಿಶ್ಚಯಿಸುತ್ತಿದ್ದಾನೆ. ಅನಾಥರಾಗುವ ಭಯ ನಮ್ಮನ್ನು ಕಾಡುತ್ತಿದೆ. ಸಂತಾನವಿಲ್ಲದೆ ನಾವು ಸದ್ಗತಿಯನ್ನು ಹೊಂದಲು ಸಾಧ್ಯವೆ? ನಮ್ಮ ಶೋಕವನ್ನು ಹಂಚಿಕೊಳ್ಳಲು ಬಂದ ಬಂಧು ನೀನಾರು?

ಪಿತೃಗಳೇ! ಆ ಮಂದಭಾಗ್ಯ ಜರತ್ಕಾರು ನಾನೇ. ಹೇಳಿ ನಾನೇನು ಮಾಡಲಿ? ಜರತ್ಕಾರು ಕೇಳಿದರು.

ಸಂತಾನ ಪಡೆಯುವ ಪ್ರಯತ್ನವಂತನಾಗು. ಅದು ನಿನಗೂ ಧರ್ಮ. ನಮ್ಮ ಉದ್ಧಾರಕ್ಕೂ ಕಾರಣವಾಗುವ ಧರ್ಮ. ಆದ್ದರಿಂದ ಮೊದಲು ಮದುವೆಯಾಗು. ಸಂತಾನವನ್ನು ಪಡೆ. ಸಂತಾನವಾಗಬೇಕಿರುವವರು ಅದು ಪಡೆಯದೆ ತಪಸ್ಸು ಮಾಡುತ್ತ ಕುಳಿತರೆ ಹೇಗೆ? ಪಿತೃಗಳು ಹೇಳಿದರು.

ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ

ಪಿತೃಗಳ ಆದೇಶನ್ನು ಆಲಿಸಿದ ಜರತ್ಕಾರು ನುಡಿದರು. ನನ್ನ ಸ್ವಂತ ಸುಖಕ್ಕಾಗಿ ನನಗೆ ಹೆಂಡತಿ ಬೇಕಿಲ್ಲ. ಹಣ ಬೇಕಿಲ್ಲ. ಹಿರಿಯರಾದ ತಮ್ಮ ಹಿತಕ್ಕಾಗಿ ವಿವಾಹವಾಗುತ್ತೇನೆ. ಆದರೆ ಒಂದು ಷರತ್ತಿನ ಮೇಲೆ. ಹೆಣ್ಣು ನನ್ನ ಹೆಸರಿನವಳೇ ಆಗಿರಬೇಕು. ಬಂಧುಗಳು ತಾವಾಗಿಯೇ ಮನಃಪೂರ್ವಕವಾಗಿ ಕೊಡಬೇಕು. ಭಿಕ್ಷೆಯಂತೆ ಸ್ವೀಕರಿಸಿ ವಿವಾಹವಾಗುತ್ತೇನೆ. ಆದರೆ ನನ್ನಂತಹ ಅಲೆಮಾರಿ ದರಿದ್ರನಿಗೆ ಯಾರು ಹೆಣ್ಣು ಕೊಟ್ಟಾರು? ತಮ್ಮನ್ನು ಉತ್ತಮ ಲೋಕಕ್ಕೆ ಏರಿಸಲು ಸಂತಾನವನ್ನು ಪಡೆಯುತ್ತೇನೆ.

ಜರತ್ಕಾರು ಕನ್ಯಾಭಿಕ್ಷೆಗಾಗಿ ಊರೂರು ಅಲೆದರು. ಹೆಣ್ಣು ದೊರೆಯಲೇ ಇಲ್ಲ. ಪಿತೃಗಳಿಗೆ ಕೊಟ್ಟ ಮಾತು ತಪ್ಪಬಾರದೆಂದು ಒಮ್ಮೆ ಕಾಡಿಗೆ ಹೋಗಿ ನಾನು ಮದುವೆಯಾಗಬೇಕೆಂದಿದ್ದೇನೆ. ಕನ್ಯೆಯನ್ನು ಕೊಡೀ ಎಂದು ಬೊಬ್ಬಿಟ್ಟರು. ಆಗ ವಾಸುಕಿ ತನ್ನ ತಂಗಿಯನ್ನು ಕೊಡಲು ಮುಂದೆ ಬಂದನು. ನನ್ನ ಹೆಸರಿನವಳಾಗಿದ್ದರೆ ಮಾತ್ರ ಸ್ವೀಕರಿಸುತ್ತೇನೆಂದರು ಜರತ್ಕಾರು. ಜರತ್ಕಾರು ಎಂದೇ ನನ್ನ ತಂಗಿಯ ಹೆಸರು ಕೂಡ. ನಿನಗಾಗಿಯೇ ಸುರಕ್ಷಿತಳಾಗಿರುವವಳು. ಸ್ವೀಕರಿಸು ಎಂದನು.

ವಾಸುಕಿಯ ತಂಗಿ ಜರತ್ಕಾರುವನ್ನು ವಿವಾಹವಾಗಿ ಅನೇಕ ಧರ್ಮಾಚರಣೆಗಳಿಂದ ಸಾರ್ಥಕ ಜೀವನ ನಡೆಸಿ ಒಂದು ಗಂಡು ಮಗುವನ್ನು ಕೂಡ ಪಡೆದು ಪಿತೃಗಳನ್ನೂ ಉದ್ಧರಿಸಿದನು. ಜರತ್ಕಾರುವಿನ ಮಗನೇ ಆಸ್ತೀಕ.

ಜನಮೇಜಯನ ಸರ್ಪಸತ್ರದಲ್ಲಿ ಸುಡುವಂತೆ ತಾಯಿಯಿಂದ ಶಾಪಗೊಂಡ ಸರ್ಪಗಳ ಶಾಪವಿಮೋಚನೆಗಾಗಿಯೇ ವಾಸುಕಿ ತನ್ನ ತಂಗಿ ಜರತ್ಕಾರುವನ್ನು ಜರತ್ಕಾರುವಿಗೆ ಕೊಟ್ಟನು. ಜರತ್ಕಾರು ಪುತ್ರ ಆಸ್ತೀಕ ಜನಮೇಜಯನ ಸರ್ಪಸತ್ರದಲ್ಲಿ ಆಹುತಿಯಾಗುತ್ತಿದ್ದ ಸರ್ಪಗಳನ್ನು ಸಂರಕ್ಷಣೆ ಮಾಡಿದನು.

ಜರತ್ಕಾರುವಿಗೆ ಸಂತಾನವಾಗದ ಕಾರಣ ವಂಶವಿಚ್ಛೇದದ ಪರಿಣಾಮ ಪಿತೃಗಳಿಗೆ ಅಧೋಗತಿಯಾಗುವ ಅಪಾಯ ಒದಗಿತು. ಬ್ರಹ್ಮಚಾರೀ ಜರತ್ಕಾರು ಪಿತೃಗಳ ಆದೇಶವನ್ನು ಶಾಠ್ಯ ತೋರದೆ ಆಲಿಸಿದರು. ಪಾಲಿಸಿದರು. ಪಿತೃಗಳ ಸದ್ಗತಿಗೆ ಕಾರಣರಾದರು.

ಏನೇನೋ ಸಾಧನೆಯ ಉನ್ಮಾದಕ್ಕೆ ಒಳಗಾಗಿ ವಿವಾಹವಾಗದೆ ಉಳಿಯುವ ಜನರು ಈ ಕಥೆಯನ್ನು ಅರ್ಥಮಾಡಿಕೊಳ್ಳಬೇಕು. ಸ್ವಹಿತಾಸಕ್ತಿಯನ್ನು ದೂರವಿಟ್ಟು ಹಿರಿಯರ ಹಿತಾಸಕ್ತಿಯನ್ನು ಕಾಪಾಡುವಂತೆ ಯತ್ನಿಸಿದ ಜರತ್ಕಾರುವಿನ ನಡೆಯನ್ನು ಗಮನಿಸಬೇಕು. ನಮ್ಮ ನಡೆ ಹಿರಿಯರ ಹಿತಕ್ಕೆ ಹೇತುವಾಗಬೇಕು. ಹೇತಿ (ಆಯುಧ) ಆಗಬಾರದು. ಜರತ್ಕಾರುವಿನ ಮಗ ಆಸ್ತೀಕ. ಮಕ್ಕಳನ್ನು ಪಡೆದರೆ ಸಾಲದು. ಅವರು ಆಸ್ತಿಕರಾಗಿರಬೇಕು. ಆಗ ಮಾತ್ರ ಪಿತೃಗಳ ಉದ್ಧಾರ ಸಾಧ್ಯ. ★

**ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು**

# ದುರ್ಮರಣವನ್ನು ಸುಮರಣವಾಗಿಸುವ ಪ್ರಕ್ರಿಯೆ

**ಅನುಗ್ರಹ– ಶ್ರೀವಿಶ್ವಪ್ರಿಯತೀರ್ಥರು** **ಸಂಗ್ರಹ–ಸಗ್ರಿ ರಾಘವೇಂದ್ರ ಉಪಾಧ್ಯಾಯ**

ಏಳು ದಿನಗಳಲ್ಲಿ ನಿರಂತರವಾಗಿ ಸಮಗ್ರ ಭಾಗವತದ ಶ್ರವಣ–ಮನನ–ಧ್ಯಾನಗಳನ್ನು ನಡೆಸಿ **'ಭೇಜೇ ಖಗೇಂದ್ರಧ್ವಜಪಾದಮೂಲಮ್....'** ಎಂದು ಭಾಗವತವೇ ಸಾರಿರುವಂತೆ ಗರುಡಧ್ವಜನ ಪಾದಮೂಲವನ್ನು ಸೇರುವ ಮೂಲಕ ಮುಕ್ತಿ ಪಡೆದ ಪರೀಕ್ಷಿದ್ರಾಜ ಮಹಾಸಾಧಕ ಎಂದು ಪ್ರಸಿದ್ಧನಾಗಿರುವವನು. ಆದರೆ ಅಂತಹವನೂ ದುರ್ಮರಣಕ್ಕೇ ಒಳಗಾದದ್ದೆಂಬುದು ಆಶ್ಚರ್ಯವೆನಿಸಿದರೂ ಸತ್ಯ. ಸಕಾಲಿಕ ಮರಣವಲ್ಲದೆ, ಬೇರೆ ಯಾವ ರೀತಿಯಿಂದ ಸತ್ತರೂ ಅದು ದುರ್ಮರಣವೇ ತಾನೇ? ಹೀಗಿರುವಾಗ ತಕ್ಷಕನ ಕಡಿತಕ್ಕೆ ಒಳಗಾಗಿ ಪರೀಕ್ಷಿತ ಹೊಂದಿರುವ ಮರಣವೂ ಮೇಲ್ನೋಟಕ್ಕೆ ದುರ್ಮರಣವೇ.

ಹಾಗಾದರೆ ಅಷ್ಟೊಂದು ಸಾಧನೆ ನಡೆಸಿದರೂ ಪರೀಕ್ಷಿತನಿಗೆ ದುರ್ಮರಣದಿಂದ ತಪ್ಪಿಸಿಕೊಳ್ಳಲಾಗಲಿಲ್ಲ ಎಂದರೆ ಸಾಧನೆಗೆ ಏನು ಬೆಲೆ? ಎಂದು ಸಾಧನಾನುಷ್ಠಾನದ ಬಗ್ಗೆಯೇ ಅವಿಶ್ವಾಸ, ನಿರಾಸೆ ಮೂಡಿದರೆ ಆಶ್ಚರ್ಯವಿಲ್ಲ. ಎಷ್ಟು ಸಾಧನೆ ನಡೆಸಿದರೂ ಕೊನೆಗೆ ಏನು ಆಗಬೇಕೆಂದಿದೆಯೋ ಹಾಗೆಯೇ ಆಗುವುದಾದರೆ ಯಾಕೆ ಸಾಧನೆ ನಡೆಸಬೇಕು? ಎಂದು ಸಾಧನಾನುಷ್ಠಾನದ ಬಗ್ಗೆ ಹಿಂಜರಿಕೆ ಉಂಟಾಗುವ ಅಪಾಯವೂ ಇಲ್ಲದಿಲ್ಲ.

**ಪರೀಕ್ಷಿತನ ಮರಣ ಸುಮರಣ:**

ಆದರೆ ಪರೀಕ್ಷಿತನ ಮರಣದ ದೃಷ್ಟಾಂತದಿಂದ ಹೀಗೆ ಸಾಧನಾನುಷ್ಠಾನದ ಬಗ್ಗೆ ಅವಿಶ್ವಾಸವನ್ನಾಗಲೀ, ನಿರಾಸೆಯನ್ನಾಗಲೀ ತಾಳುವುದಕ್ಕೆ ಅವಕಾಶವಿಲ್ಲ. ಬದಲಾಗಿ ಸಾಧನಾನುಷ್ಠಾನದ ಬಗ್ಗೆ ಅಧಿಕ ಸ್ಫೂರ್ತಿ, ವಿಶ್ವಾಸವನ್ನೇ ಪಡೆಯಬಹುದಾಗಿದೆ. ಯಾಕೆಂದರೆ ಪರೀಕ್ಷಿತನ ಮರಣ ಮೇಲ್ನೋಟಕ್ಕೆ ದುರ್ಮರಣದಂತೆ ಕಂಡರೂ ಶಾಸ್ತ್ರೀಯ ದೃಷ್ಟಿಯಿಂದ ಅದು ಅತ್ಯಂತ ಸುಮರಣ. ಸಮಾಧ್ಯವಸ್ಥೆಗೊಳಗಾಗಿದ್ದ ಶಮೀಕರನ್ನು ಅವಮಾನಿಸುವ ಮೂಲಕ 'ಬ್ರಹ್ಮಹತ್ಯೆ'ಯ ವ್ಯಾಪ್ತಿಯಲ್ಲಿ ಸೇರಬಹುದಾದಷ್ಟು ಅತಿಹೇಯ ಅಪರಾಧವನ್ನೆಸಗಿದ್ದ ಪರೀಕ್ಷಿತ 'ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೇ' ಎಂಬ ಕರ್ಮಸಿದ್ಧಾಂತದ ನಿಯಮಕ್ಕನುಗುಣವಾಗಿ ತಕ್ಷಕಸರ್ಪದ ಕಡಿತಕ್ಕೊಳಬೇಕಾದುದು ಅನಿವಾರ್ಯ. ಅವರವರ

**ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.**

ಕರ್ಮಕ್ಕನುಗುಣವಾಗಿಯೇ ಫಲ ನೀಡುವ ಪ್ರಯುಕ್ತ 'ಸಮ' ಎನಿಸಿರುವ ಕರ್ಮಾಧ್ಯಕ್ಷನಾದ ಭಗವಂತ ಪರೀಕ್ಷಿತನ ಪಾಲಿಗೆ ಆ ದುಷ್ಫಲವನ್ನು ಕೊಡಿಸುವುದರಲ್ಲೇನೂ ಪಕ್ಷಪಾತ ಮಾಡದೆ ಆ ದುಷ್ಫಲವನ್ನು ತಲುಪಿಸಿಯೇ ಬಿಡುವನು. ಆದರೆ ಅದೇ ಪ್ರಸಂಗದಲ್ಲಿ ಸಪ್ತಾಹಾವಧಿಯಲ್ಲಿ ಪರೀಕ್ಷಿತನಿಂದ ಭಾಗವತದ ಶ್ರವಣ ಮನನಗಳನ್ನು ನಡೆಸಿ ಅದರ ಸುಫಲವನ್ನೂ ತಲುಪಿಸಿರುವನೆಂಬುದು ಚಮತ್ಕಾರದ ಸಂಗತಿ. ಶಮೀಕರನ್ನು ಅವಮಾನಿಸಿರುವ ಅಪರಾಧದ ದುಷ್ಫಲವಾಗಿ ತಕ್ಷಕಕಡಿತದಿಂದ ದುರ್ಮರಣವಾದರೆ, ಭಾಗವತಶ್ರವಣಾದಿ ಸಾಧನೆಯ ಸತ್ಫಲ ಸುಮರಣವಾಗಿದ್ದು ಮೇಲ್ನೋಟಕ್ಕೆ ದುರ್ಮರಣದಂತೆ ಕಾಣುವ ಪರೀಕ್ಷಿತನ ಮರಣಕ್ಕೆ ಸುಮರಣದ ಮೆರುಗು ನೀಡಿದ್ದು ಕರ್ಮಾಧ್ಯಕ್ಷನ ಚಾಕಚಕ್ಯ ಹಾಗೂ ಭಕ್ತವಾತ್ಸಲ್ಯ.

ಇನ್ನೇನು ತಕ್ಷಕ ಬಂದು ಪರೀಕ್ಷಿತನನ್ನು ಕಚ್ಚಿ ದುರ್ಮರಣಕ್ಕೆ ಒಳಪಡಿಸಬೇಕೆಂದಾಗ **'ಪರೀಕ್ಷಿದಪಿ ರಾಜರ್ಷಿರಾತ್ಮನ್ಯಾತ್ಮಾನ ಮಾತ್ಮನಾ । ಸಮಾಧಾಯ ಪರಂ ದಧ್ಯೌ ಅಸ್ಪಂದಾಸುರ್ಯಥಾ ತರುಃ'** ಎಂದು ಭಾಗವತ (12–5–9) ಪ್ರಶಂಸಿಸುತ್ತಿರುವಂತೆ ಪರೀಕ್ಷಿತ ನಿರ್ಭೀತನಾಗಿ, ದೇಹಾಭಿಮಾನವನ್ನು ತ್ಯಜಿಸಿ ಸಮಾಧ್ಯವಸ್ಥೆಗೆ ಒಳಗಾಗುವನು. **'ಅಂತಕಾಲೇ ಚ ಮಾಮೇವ ಸ್ಮರನ್ ಮುಕ್ತ್ವಾ ಕಲೇವರಮ್ । ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ'** ಎಂದು ತನ್ನನ್ನು ಸ್ಮರಿಸುತ್ತ ದೇಹವನ್ನು ತ್ಯಜಿಸುವವನು ತನ್ನನ್ನೇ ಹೊಂದುವನೆಂದಿದ್ದ ಭಗವಂತನು ಭಕ್ತನಾದ ಪರೀಕ್ಷಿತ ತನ್ನನ್ನು ಹೊಂದುವಂತೆ ಅವನಿಗೆ ತನ್ನ ವಿಶೇಷ ಸ್ಮರಣೆಯನ್ನು ಕೊಟ್ಟು ಅನುಗ್ರಹಿಸಿದ. ಇದೇ ಪರೀಕ್ಷಿತನ ದುರ್ಮರಣಕ್ಕೆ ಭಗವಂತ ನೀಡಿದ ಸುಮರಣದ ಪರಿಷ್ಕಾರ. ಮರಣದ ಬಳಿಕ ಪರೀಕ್ಷಿತ ಯಾವುದೇ ದುರ್ಗತಿಗೆ ಬಲಿಯಾಗದೆ ಮೋಕ್ಷವನ್ನೇ ಹೊಂದಿರುವನೆಂದರೆ ಅವನ ಮರಣ ಸುಮರಣ ಎಂಬುದರಲ್ಲಿ ಸಂದೇಹವಿಲ್ಲ.

ಆದುದರಿಂದ ದುರ್ಮರಣ ಸುಮರಣಗಳ ಸ್ವರೂಪ ಹೊರಗಿನ ಕಾರಣಗಳಿಗಿಂತಲೂ ಮುಖ್ಯವಾಗಿ ಭಗವಂತನ ಸ್ಮರಣೆಗೆ ಪೋಷಕವಾಗಿರುವುದೋ ಇಲ್ಲವೋ ಎಂಬ ಅಂಶವನ್ನೇ ಅವಲಂಬಿಸಿರುವಂತಹದ್ದು. **'ತದೇವ ಲಗ್ನಂ ಸುದಿನಂ ತದೇವ....ಲಕ್ಷ್ಮೀಪತೇ ತೇಽಂಘ್ರಿಯುಗಂ ಸ್ಮರಾಮಿ'**– ಎಂಬ ಮಾತು ಸುದಿನಾದಿಗಳ ನಿರ್ಣಾಯಕ ಲಕ್ಷ್ಮೀಪತಿಯ ಪಾದ ಸ್ಮರಣೆಗೆ ಪ್ರಯೋಜಕವಾಗುವ ಧರ್ಮವೇ– ಎಂದು ಹೇಗೆ ನಿರ್ಧರಿಸಿರುವುದೋ ಹಾಗೆ.

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.

**ಅನಾಯಾಸೇನ ಮರಣ.......ಪರಿಷ್ಕಾರ**

ಆದ್ದರಿಂದ ನಾವು ಪ್ರತಿನಿತ್ಯ ದೇವರಲ್ಲಿ ಸಲ್ಲಿಸುವ **'ಅನಾಯಾಸೇನ ಮರಣಂ....'** ಎಂಬ ಬೇಡಿಕೆಯನ್ನು ಸ್ವಲ್ಪ ಪರಿಷ್ಕರಿಸೋಣ.

ಆಯಾಸಕ್ಕೊಳಗಾಗದೆ ಮರಣವನ್ನು ಪಡೆಯುವಂತಾಗಬೇಕು. ಆದರೆ ಇಷ್ಟೇ ಅಲ್ಲ. ಮರಣಾವಧಿಯ ಆ ಅನಾಯಾಸದ ಸ್ಥಿತಿ ನಿನ್ನ ಸ್ಮರಣೆಗೆ ಪೋಷಕವಾಗುವಂತೆಯೂ ಮಾಡು. ಅಲ್ಲದೆ ಪ್ರಾರಬ್ಧಕರ್ಮಾನುಸಾರವಾಗಿ ಆಯಾಸಪೂರ್ವಕಮರಣಕ್ಕೇ ಒಳಗಾಗಬೇಕೆಂದೇ ಇದ್ದರೂ ಆ ಪರಿಸ್ಥಿತಿಯಲ್ಲೂ ಪರೀಕ್ಷಿತನಿಗೆ ಹೇಗೋ ಹಾಗೆ ನಿನ್ನ ಸ್ಮರಣೆ ಬರುವಂತಾದರೂ ಮಾಡು.

*ಪ್ರೋಷ್ಠಪದೀಪ್ರವಚನ ರೂಪದಲ್ಲಿ ಭಾಗವತಪ್ರವಚನ ಮಾಲಿಕೆಯನ್ನು ನಡೆಸಿಕೊಟ್ಟ ಶ್ರೀವಿಶ್ವಪ್ರಿಯತೀರ್ಥರು ಆ ಮಾಲಿಕೆಯನ್ನು ತಮ್ಮ ಆರಾಧ್ಯ ಕಾಳಿಯಮರ್ದನಕೃಷ್ಣನ ಪಾದಾರವಿಂದದಲ್ಲಿ ಸಮರ್ಪಿಸುತ್ತ, ಅದರ ಅಂಗವಾಗಿ ಅವನ ಮುಡಿಗೇರಿಸಿದ ಒಂದು 'ಜ್ಞಾನಪುಷ್ಪ')*


**ಶ್ರೀ ಆಚಾರ್ಯ ಮಧ್ವರ ಸಾಕ್ಷಾತ್ ಶಿಷ್ಯರಾದ ಶ್ರೀ ಹೃಷೀಕೇಶ ತೀರ್ಥರು ಆಚಾರ್ಯರಿಂದಲೇ ಪಾಠ ಕೇಳುತ್ತಾ, ಅದನ್ನು ಲಿಪಿಬದ್ಧ ಗೊಳಿಸಿದ್ದಾರೆ. ಈ ಸರ್ವಮೂಲ ಪ್ರತಿ ಇನ್ನೂ ಉಳಿದಿದ್ದು ಶ್ರೀ ಫಲಿಮಾರು ಮಠದಲ್ಲಿ ಪೂಜೆಗೊಳ್ಳುತ್ತಿದೆ. ಲಕ್ಷ್ಮೀನಾರಾಯಣರ ಹಾಗೂ ಪವನ ಭಾರತಿಯರ ಸನ್ನಿಧಾನವಿರುವ ಈ ಪ್ರತಿಯು ಎಲ್ಲಾ ಭಕ್ತರ ಮನೆಗಳಲ್ಲಿ ಪೂಜೆಗೊಂಡು, ಮನದಲ್ಲಿ ನೆಲಸಬೇಕೆಂಬ ಬಯಕೆಯಿಂದ, ಮೂಲ ಹಸ್ತ ಪ್ರತಿಯನ್ನು ಆಧುನಿಕ ಆಣವಿಕ ತಂತ್ರದ ಮೂಲಕ ಕಿರಿದು ಗೊಳಿಸಿ ಸುವರ್ಣದ ಎರಕದಿಂದ, ಎಲ್ಲರಿಗೂ ಸಿಗುವಂತೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ –**

**NanoArk Corporation, Rochester, New York**

**Phone (585) 424-2765 www.nanoarkcorp.com**

**NanoArk Technologies India Pvt Ltd. Bangalore.**

**Phone: (Office) – (80) 42195122 (Cell) – 9986220089**

**Email–info@nanoarkindia.com**

**Website– www.nanoarkindia.com**


**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**

ವಿಶೇಷ ಲೇಖನ

# ತುಳಸಿ – ಮಹಾಲಕ್ಷ್ಮೀ

ಲೇಖಕರು : ಡಾ ವ್ಯಾಸನಕೆರೆ ಪ್ರಭಂಜನಾಚಾರ್ಯ

ಶ್ರೀ ಹರಿಯ ಪೂಜಾ ಪ್ರತೀಕವಾಗಿ ಸಾಲಿಗ್ರಾಮವು ಸರ್ವಶ್ರೇಷ್ಠ. ಅದರಂತೆ ಪೂಜಾಸಾಧನದ್ರವ್ಯವಾಗಿ ತುಳಸಿ ಸರ್ವಶ್ರೇಷ್ಠ. ಸಾಲಿಗ್ರಾಮದಲ್ಲಿ ಸಾಕ್ಷಾತ್ ಶ್ರೀಹರಿಯ ನಿತ್ಯ ಸನ್ನಿಧಾನ.

ಸಕಲ ಸಾಧನಗಳಿದ್ದು ತುಳಸಿಯಿಲ್ಲದ ಪೂಜೆ ಶ್ರೀಹರಿ ಕೊಳ್ಳನು. ತುಳಸಿಯ ದರ್ಶನ ಸ್ಪರ್ಶನ ವಂದನ ಅರ್ಪಣೆ ಮೊದಲಾದ ಒಂದೊಂದೂ ಸಹ ಅತ್ಯಂತ ತಾರಕ. ತುಳಸಿ ಇದ್ದ ಸ್ಥಳದಲ್ಲಿಯೇ ವಿಷ್ಣುವಿನ ನಿತ್ಯಸನ್ನಿಧಾನ. ತುಳಸಿಯ ದಳ ಇಲ್ಲದಿದ್ದರೆ ಅದರ ಎಲೆಯೂ ಶ್ರೇಷ್ಠ. ಕಾಷ್ಠವೂ ಶ್ರೇಷ್ಠ. ತುಳಸಿಯು ಒಣಗಿದ್ದರೂ ಯಾವ ದೋಷವೂ ಇಲ್ಲ. ಅತ್ಯಂತ ಅನಿವಾರ್ಯ ಸಂದರ್ಭಗಳಲ್ಲಿ ನಿರ್ಮಾಲ್ಯ ತುಳಸಿಯನ್ನು ತೊಳೆದೂ ಸಹ ಪೂಜೆಗೆ ಪುನಃ ಉಪಯೋಗಿಸಬಹುದು. ಕೊನೆಯ ಪಕ್ಷ ತುಳಸಿ ಎಂಬ ನಾಮವನ್ನಾದರೂ ಉಚ್ಚರಿಸಿ ಶ್ರೀಹರಿಯನ್ನು ಪೂಜಿಸಬೇಕು. ನೈವೇದ್ಯ ಪದಾರ್ಥಗಳಲ್ಲೂ ತುಳಸಿದಳವನ್ನು ಹಾಕಲೇಬೇಕು. ದಾನ ನೀಡುವಾಗಲೂ ತುಲಸೀದಳ ಆತ್ಯಗತ್ಯ. ಆಂತೂ ತುಳಸಿಯಿಲ್ಲದ ಪೂಜೆ ಮೊದಲಾದ ಸಕಲ ಕಾರ್ಯಗಳು ನಿಷಿದ್ಧ. ತುಳಸಿವನವನ್ನು ಕೇವಲ ದರ್ಶನ ಮಾಡುವುದರಿಂದಲೂ ಗೋಹತ್ಯ ಬ್ರಹ್ಮಹತ್ಯ ಮೊದಲಾದ ಸಕಲ ದೋಷಗಳು ಪರಿಹಾರವಾಗುವುದು. ಕೋಟಿ ಗೋದಾನಗಳ ಫಲ ಲಭಿಸುವುದು. ತುಳಸಿ ಇದ್ದಲ್ಲಿ ಗಂಗಾದಿ ಸಕಲ ತೀರ್ಥಗಳೂ ನೆಲೆಸುವವು. ಹೀಗೆ ತುಳಸಿಯ ಮಹಿಮೆ ಅಗಾಧವಾದದ್ದು, ಅಪೂರ್ವವಾದದ್ದು, ಅಪಾರವಾದದ್ದು. ಹಾಗಿದ್ದರೆ ಈ ತುಳಸಿ ಯಾರು?

**ತುಲಸೀ ಜಾಂಬವತೀ ಪ್ರೋಕ್ತಾ** ಎಂಬ ವಾಕ್ಯವನ್ನು ಉಲ್ಲೇಖಿಸಿ ಕೆಲವರು ತುಳಸಿಯನ್ನು ಜಾಂಬವತೀ ಎಂಬುವರು. ಆದರೆ, ಪಂಚರಾತ್ರದ ವಚನ ಈ ಎಲ್ಲದಕ್ಕೂ ಉತ್ತರವಾಗಿದೆ. **ರಮಾ ಶ್ರೀತುಳಸೀಸಂಸ್ಥಾ** ಎಂದರೆ ತುಳಸಿಯಲ್ಲಿ ಮಹಾಲಕ್ಷ್ಮಿಯ ಸನ್ನಿಧಾನ ಎಂದರ್ಥ. ಇದಕ್ಕೆ ತುಳಸಿಯ ಬಗ್ಗೆ ಮೇಲೆ ಉಲ್ಲೇಖಿಸಿದ ಮಹಿಮೆಯೆಲ್ಲಾ ಅನುಗುಣವಾಗುತ್ತದೆ. ಹರಿದಾಸ ಸಾಹಿತ್ಯದಲ್ಲಿ ತುಳಸಿಯನ್ನು ಪುರಂದರವಿಟ್ಠಲನ ರಾಣಿ. ವರಲಕ್ಷ್ಮೀ ಶ್ರೀ ತುಳಸಿ

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

(ಶ್ರೀ ಪುರಂದರ ದಾಸ). ಸಂಸಾರ ಬಲೆಯಿಂದ ಕೆಡೆಗೆತ್ತು ಯೆನ್ನ ಕಲುಷವರ್ಜಿತೆ ಭಜಿಪರಿಗೆ ಪರಮ ಮಂಗಳದ ಪದವಿತ್ತು ಸಲಹುವಿ ಜಗನ್ನಾಥ ವಿಟ್ಠಲನ ಚರಣಾಬ್ಜ ಮನದಲ್ಲಿ ನೀ ತೋರಿಸೆನಗೆ ಶೀಘ್ರದಿ ಮೊದಲಾಗಿ ಮಹಾಲಕ್ಷ್ಮಿಗೆ ಅನ್ವಯಿಸುವ ಹಿರಿಮೆ ಎಂದಲೆ ಸ್ತುತಿಸಿರುವರು. ಪುರಂದರದಾಸರಂತೂ **"ವರಲಕ್ಷ್ಮೀ ಶ್ರೀ ತುಳಸಿ"** ಎಂಬ ಮಾತಿನಲ್ಲಿ ಪಂಚರಾತ್ರದ ಭಾವವನ್ನೇ ಇಟ್ಟಿರುವರು. ಆದ್ದರಿಂದ ತುಳಸಿಯನ್ನು ಸಾಕ್ಷಾತ್ ಶ್ರೀಮಹಾಲಕ್ಷ್ಮಿಯೆಂದೇ ಭಾವಿಸುವುದು ಸಮುಚಿತ. ತುಲಸೀ ಎಂಬ ಹೆಸರೇ ಸರ್ವಶ್ರೇಷ್ಠ ಸ್ತ್ರೀ ಎಂಬ ಅರ್ಥವನ್ನು ನೀಡುವುದು. ಮಹಾಲಕ್ಷ್ಮಿಯ ಹೊರತು ಶ್ರೇಷ್ಠ

ಸ್ತ್ರೀ ಮತ್ತಾರು? **"ಕ್ಷೀರೋದಮಥನೋದ್ಭೂತೇ"** ಎಂಬ ತುಲಸಿಪ್ರಾರ್ಥನೆಯಲ್ಲೂ ತುಲಸೀ ಶ್ರೀಮಹಾಲಕ್ಷ್ಮಿ ಎಂಬ ಧ್ವನಿ ಇದೆಯಲ್ಲವೆ?

ಜಾಂಬವತಿಗೆ ಇಷ್ಟೆಲ್ಲ ಹಿರಿಮೆ ಹೇಗೆ ಕೂಡೀತು? **ತುಲಸೀ ಜಾಂಬವತೀ ಪ್ರೋಕ್ತಾ** ಎಂಬ ಪುರಾಣ ವಾಕ್ಯಕ್ಕೆ ಇದು ವಿರುದ್ಧವೇನೂ ಅಲ್ಲ. ಪುರಾಣಗಳಿಗಿಂತ ಸಪ್ತಮೂಲಶಾಸ್ತ್ರಗಳಲ್ಲಿ ಪರಿಗಣಿತವಾಗಿರುವ ಪಂಚರಾತ್ರವು ಪ್ರಧಾನವಾದ್ದರಿಂದ ಅದಕ್ಕನುಗುಣವಾಗಿಯೇ ಪುರಾಣವಾಕ್ಯವನ್ನು ಅರ್ಥೈಸುವುದು ವಿಹಿತ. ಮಹಾಲಕ್ಷ್ಮೀ ತುಳಸಿಗೆ ನಿತ್ಯಾಭಿಮಾನಿನಿ ಆಗಿದ್ದು ಜಾಂಬವತಿ ಅವಾಂತರಾಭಿಮಾನಿನಿ ಎಂದು ಭಾವಿಸಿದರೆ ಸಮನ್ವಯ ಸಾಧ್ಯ. ವಿಷ್ಣುಚಕ್ರಕ್ಕೆ ದುರ್ಗೆ ಮುಖ್ಯಾಭಿಮಾನಿನಿ ಆದರೂ ಕಾಮ ಅವಾಂತರಾಭಿಮಾನಿ ಶಂಖಕ್ಕೆ ಶ್ರೀದೇವಿ ಮುಖ್ಯಾಭಿಮಾನಿನಿಯಾದರೂ ಅನಿರುದ್ಧ ಅವಾಂತರಾಭಿಮಾನಿ ಇತ್ಯಾದಿ ಪ್ರಸಂಗಗಳಲ್ಲಿ ಹೇಗೋ ಹಾಗೆ ಎಂದು ತಿಳಿಯಬಹುದು. ಜಾಂಬವತಿಯಲ್ಲಿ ವಿಶೇಷ ರಮಾಸನ್ನಿಧಾನ ಎಂಬ ಮಾತು ಇದಕ್ಕೆ ಪೋಷಕವೇ ಆಗಿದೆ. ಉಡುಪಿಯ ಶ್ರೀಕೃಷ್ಣಮಠದಲ್ಲಿ ಶ್ರೀಮುಖ್ಯಪ್ರಾಣದೇವರ ಮುಂಚಿತವಾಗಿಯೇ ಶ್ರೀ ತುಳಸಿಗೆ ಆರತಿಯೆತ್ತುವ ಸಂಪ್ರದಾಯವು ಇದನ್ನು ಧೃಢಪಡಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ತುಳಸಿಗೆ ಸರ್ವಶ್ರೇಷ್ಠ ಪೂಜಾಸಾಧನ ದ್ರವ್ಯ ಎಂಬ ಹಿರಿಮೆಯು ಸಾರ್ಥಕವೆನಿಸುತ್ತದೆ. ತುಳಸಿಯ ಬಗ್ಗೆ ಹೆಚ್ಚಾಗಿ ಜಿಜ್ಞಾಸೆ ನಡೆದಿಲ್ಲ ಎಂಬುದು ಇದಕ್ಕೆ ಉತ್ತರ. ತುಳಸಿಯ ಸ್ವರೂಪದ ಬಗ್ಗೆ ಹೀಗೆ ನಿಶ್ಚಿತವಾದ ಭಾವನೆ ಇರುವುದರಿಂದಲೇ ಅದರ ಬಗ್ಗೆ ಹಾಗೆ ಹೆಚ್ಚಿನೆ ಜಿಜ್ಞಾಸೆ ನಡೆದಿಲ್ಲ. ಸ್ಫುಟವಾದ ವಿಚಾರದಬಗ್ಗೆ ಜಿಜ್ಞಾಸೆ ಏಕೆ? ಸಾಲಿಗ್ರಾಮದಲ್ಲಿ ವಿಷ್ಣುಸನ್ನಿಧಾನ ಎನ್ನುವುದಕ್ಕೆ ಸರ್ವ ಸಂಪ್ರತಿಪತ್ತಿ ಹೇಗೋ ಹಾಗೆ. ★

**ಗೋವುಗಳನ್ನು-ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.**

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ಅಕಸ್ಮಾತ್ ವಿಷಯಪದಾರ್ಥ ನೀನು ನೀಡಿದೆ. ನಾನು ಸುಖ ಅನುಭವಿಸಿದೆ. ಹಾಗೆಂದ ಮಾತ್ರಕ್ಕೆ ಸಾಧಿಸಿದಂತೆ ಆಯಿತೆ? ಕಾಲಿದೆ ಎಂದ ಮಾತ್ರಕ್ಕೆ ಸದಾ ನಡೆಯುತ್ತಿರಲಾಗದು. ಆಗ ಕಾಲು ಸೋತು ಊತ ಬರುತ್ತದೆ. ಬಾಯಿ ಇದೆ ಎಂದು ಬೇಕಾಬಿಟ್ಟಿ ತಿನ್ನಲಾಗದು. ಆಗ ಹೊಟ್ಟೆ ಕೆಟ್ಟು ಹಾಸಿಗೆ ಹಿಡಿದಂತೆಯೇ ಸರಿ. ವಿಷಯಭೋಗ ಮಾನವನಿಗೆ ಆಯಾಮ ತರುವಂತೆ ಆಯಾಸವನ್ನೂ ತರುತ್ತದೆ. 'ವ್ಯಾಯಾಮ ಹೆಚ್ಚಾದಷ್ಟು ಬೆವರುವುದು ಬೇಕಾದಷ್ಟು' ಎಂಬ ಮಾತಿಲ್ಲವೆ? ಇವುಗಳಿಂದ ಇಂದ್ರಿಯಗಳು ದುರ್ಬಲವಾಗುತ್ತವೆ. ಆಗ ಒದ್ದಾಡುವವನು ಒಡೆಯನೇ ಅಲ್ಲವೆ?

ವಾದಿರಾಜರ ಮಾತು ಗಮನಿಸಿ.

**ಅತಿಭುಕ್ತೌ ಅಜೀರ್ತಿಃ ಸ್ಯಾತ್ ಅತಿಪಾನೇ ಮಹೋದರಃ**

'ತಿನ್ನುವುದು ಅತಿಯಾದಾಗ ಅಜೀರ್ಣ. ಕುಡಿದದ್ದು ಮೀರಿದಾಗ ಸ್ಥೂಲೋದರ'

ಹೀಗಾಗಿ ನಮ್ಮ ಸುಖ ನಮ್ಮನ್ನೇ ಸುಸ್ತಾಗಿಸುವುದಾದರೆ ಅದೇಕೆ ಬೇಕು?

ನೀನು ದೀರ್ಘಾಯುಷ್ಯ ನೀಡುವ ವಿಚಾರ ನೀನು ನೀಡಬಹುದು. ಎಷ್ಟರಮಟ್ಟಿಗೆ? ಎಷ್ಟೇ ನೀಡಿದರೂ ಒಂದು ದಿನ ಸಾಯಲೇಬೇಕಲ್ಲವೆ? ಅಲ್ಲಿಯ ತನಕ ಸಾಯದೇ ಸತಾಯಿಸಿದ ಹಾಗಾಯಿತು. ಅಂತಹ ಚಿರಜೀವನ ದೀರ್ಘಕಾಲದ ದೃಷ್ಟಿಯಿಂದ ಅತ್ಯಲ್ಪವೇ ಸರಿ. ನೀನೇನು ನಮ್ಮನ್ನು ಸಾವೇ ಬಾರದಂತೆ ಮಾಡಲಾರೆ. ಹೀಗಿರುವಾಗ ನಿನ್ನನ್ನು ಗೋಗರೆದದ್ದು ಅತಿಯಾಯಿತು. ಪಡೆದದ್ದು ಮಿತಿಯಾಯಿತು. ಇದು ನನಗೆ ಬೇಡ.

ಅಮರತ್ವಕ್ಕೆ ಕಾರಣವಾಗುವ ತತ್ತ್ವಜ್ಞಾನವನ್ನೇ ನೀಡು.

ಇನ್ನು ನೃತ್ಯ-ಗೀತೆ ಒಂದು ದೇಹದ ಕುಣಿತ. ಇನ್ನೊಂದು ಮನಸ್ಸಿನ ಕುಣಿತ. ಇದು ಕಾಲಕಳೆಯಲು ಚೆನ್ನ. ಒಂದು ನೋಡುತ್ತಾ ಸಮಯ ಹಾಳು. ಮತ್ತೊಂದು ಕೇಳುತ್ತಾ ಬಾಳು ಹಾಳು. ಮತ್ತೆ ಆರೋಗ್ಯ-ಉಲ್ಲಾಸದ ಆ ಕಾಲ ಸಿಗದು. ಸಿಕ್ಕರೂ

ಬಹುಸಜ್ಜನರ ಮಾರ್ಗವನ್ನಾಶ್ರಯಿಸಿ.

ಮಾನವ ಜನ್ಮ ಬರದು. ಆಗ ಏನು ಪ್ರಯೋಜನ? ನೀನು ಕೊಡುತ್ತಿರುವುದು ನಿನಗೆ ಉಪಯೋಗಕ್ಕೆ ಬರುತ್ತಿಲ್ಲ ಎಂದು ಭಾವಿಸಿ. ಅದನ್ನು ನಾನು ಇಟ್ಟುಕೊಂಡು ಅನುಪಯುಕ್ತ ಬದುಕು ಬಾಳಬೇಕೆ? ಅದು ನಿನಗೆ ಇರಲಿ ನನಗೆ ಬೇಡ.

'ವಿವಿಧ ಸಾಂಸಾರಿಕ ದುಃಖದರ್ಶನೇನ ವಿರಕ್ತಸ್ಯ ಶಮದಮಾದಿಮತಃ ಎಂದು ಜಯತೀರ್ಥರು ವಿಷಯಪದಾರ್ಥಗಳ ದುಃಖಗಳನ್ನು ಕಂಡು ಕಂಡು ವಿರಕ್ತನಾದವನು ಮಾತ್ರ ಶಾಸ್ತ್ರವಿಚಾರಕ್ಕೆ ಅಧಿಕಾರಿ ಎಂದಿರುವುದು ನಿಚ್ಚಳ ಸತ್ಯ. ಅವು ನಚಿಕೇತನಲ್ಲಿ ಪೂರ್ಣವಾಗಿವೆ. ಆ ವಿಷ್ಣುಭಕ್ತಿಯು ಮಾತ್ರವೇ ಎಲ್ಲವನ್ನೂ ಬದಿಗಿಡಬಲ್ಲದು. 'ಜ್ಞಾನೇನೈವ ಪರಂ ಪದಂ' ಜ್ಞಾನದಿಂದಲೇ ಹಿರಿಯ ಪದವಿ. ಅಮರತ್ವ–ನಿತ್ಯಸುಖ ಎಂಬ ಎಚ್ಚರ ಸಾಧಕನಿಗೆ ಇರಬೇಕು.

ಯಾರೋ ಮುದಿವಯಸ್ಸಿನ ರಾಷ್ಟ್ರಪತಿಗಳು ರಾಷ್ಟ್ರಪತಿಭವನವನ್ನು ಖಾಲಿಮಾಡದೆ ಸತಾಯಿಸಿದಾಗ ಅವರಿಗೆ ಬೇರೆಲ್ಲಾ ಸೌಲಭ್ಯಕೊಟ್ಟು ಬೇರೆಡೆ ಕಳುಹಿಸಲಾಯಿತು. ತಾನಾಗಿ ಸಂಪಾದಿಸಿದ ಸಂಪತ್ತು ಏನಲ್ಲ ಇದು. ಆದರೂ ಬಂದದ್ದನ್ನು ಬಿಟ್ಟು ಹೋಗುವುದು ಸರಿಯಲ್ಲ ಎಂದು ಅವರ ವಾದ.

ಆದರೆ ಇಲ್ಲಿ ನಚಿಕೇತ ನೀಡುತ್ತೇನೆ ಎಂದು ಯಮ ಒತ್ತಾಯಿಸಿದರೂ ಸಹ ಒತ್ತಟ್ಟಿಗೆ ಸರಿಸಿ ನೀನೆ ಇಟ್ಟುಕೋ ಎನ್ನಬೇಕೆ? ನಚಿಕೇತನಂತಹ ಬಾಲಕರು ಸಾಧಕವರ್ಗಕ್ಕೆ ಭೂಷಣ. ಕೆಲವರು ಹಣಕ್ಕಾಗಿ–ಪ್ರಾಣಕ್ಕಾಗಿ ಹೆಜ್ಜೆ ಹೆಜ್ಜೆಗೂ compromise ಆಗಿರುತ್ತಾರೆ. ಇಲ್ಲಿ ಯಮನ ಬಳಿಯಲ್ಲೂ ಸಹ ಯಾವ ಮುಲಾಜಿಗೂ ಸಿಕ್ಕದ ಇವನನ್ನು ಏನನ್ನೋಣ?

**ನ ವಿತ್ತೇನ ತರ್ಪಣೀಯೋ ಮನುಷ್ಯ**
**ಲಪ್ಸ್ಯಾಮಹೇ ವಿತ್ತಮದ್ರಾಕ್ಷ್ಮ ಚೇತ್ತ್ವಾ ।**
**ಜೀವಿಷ್ಯಾಮೋ ಯಾವದೀಶಿಷ್ಯಸಿ ತ್ವಂ**
**ವರಸ್ತು ಮೇ ವರಣೀಯಃ ಸ ಏವ ॥**

ಮನುಷ್ಯನಿಗೆ ಹಣ ನೀಡಿ ಸಂತೋಷ ಪಡಿಸಲಾಗದು. ನಿನ್ನನ್ನು ಕಂಡೆವೆಂದರೆ ನಿಧಿ ಸಿಕ್ಕಿದಂತೆಯೆ ಆಯಿತು. ನೀನು ಒಡೆಯನಾಗಿರುವ ತನಕ ನಾನು ಬದುಕಬಲ್ಲೆ. ನಾನು ಕೇಳುವ ವರ ಹರಿಯ ಮಹಿಮೆಯ ಬಿತ್ತರ!

(ಮುಂದುವರಿಯುವುದು)

**ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.**

ಸ್ತೋತ್ರ ಚಿಂತನೆ

ಭಾಗ–7

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

ಬಂಗಾರದ ಜೊತೆಗೆ ಕಬ್ಬಿಣ, ಹಿತ್ತಾಳೆ, ತಾಮ್ರ ಮುಂತಾದ ಲೋಹಗಳೆಲ್ಲವೂ ಅಧಿಕವಾಗಿ ಸೇರಿದಾಗ ಅದನ್ನು ಬಂಗಾರ ಎನ್ನಲಾಗದು. ಅದು ಉಪಯೋಗವಿಲ್ಲದ ಬೆಟ್ಟು ಬಂಗಾರ. ಪ್ರಕಾಶಹೀನವಾಗಿರುತ್ತದೆ. ಸ್ವಯಂ ಬಂಗಾರವು ಶುಭ್ರವಾಗಿದ್ದರೂ ಇತರಲೋಹಗಳ ಸಂಪರ್ಕದಿಂದ ಪ್ರಭೆನಾಶವಾಗಿ ಮೌಲ್ಯಹೀನವಾಗುತ್ತದೆ. ಆ ಬಂಗಾರದ ನಿಜವಾದ ಪ್ರಕಾಶ ಕಾಣಬೇಕಿದ್ದರೆ ಬಂಗಾರವನ್ನು ಬೆಂಕಿಗೆ ಹಾಕಬೇಕು. ಆವಾಗ ಪೃಥಕ್ಕಾಗಿ ತನ್ನಪ್ರಭೆ ಏನೆಂದು ಪ್ರಕಟಗೊಳಿಸುತ್ತದೆ. ಬೆಂಕಿಗೆ ಹಾಕದೆ ಬಂಗಾರಕ್ಕೆ ಶುದ್ಧಿ ಇಲ್ಲ. ಅದರಂತೆ ಸಜ್ಜೀವರೆಲ್ಲರೂ ಬಂಗಾರದಂತಿದ್ದಾರೆ. ಆದರೆ ಪ್ರಕೃತಿಯ ಸಂಪರ್ಕ, ಪೂರ್ವಸಂಚಿತ ಕರ್ಮಗಳಿಂದಾಗಿ ಶ್ರೀಹರಿ ಎಂಬ ಅರಿವಿನ ಬೆಂಕಿಯಲ್ಲಿ ಜೀವನೆಂಬ ಬಂಗಾರದ ಸಮರ್ಪಣೆ ಯಾವಾಗಲೂ ನಡೆಯಬೇಕು. ಪರಮಾತ್ಮನ ಸಂಪರ್ಕವಾದ ಬಳಿಕ ಕಾಮಾದಿ ಕಶ್ಮಲವೆಲ್ಲವೂ ದೂರವಾಗಿ ಪರಿಶುದ್ಧತೆಗೆ ದಾರಿಯಾಗುತ್ತದೆ. ನಿರಂತರವಾದ ಹರಿ ಭಕುತಿ ಎಂಬ ಜಲಧಾರೆಯಿಂದ ಮತ್ಸ್ಯನಾಮಕನಾದ ಶ್ರೀಹರಿಯು ಅಂತಃಕರಣವನ್ನು ನಿರ್ಮಲಗೊಳಿಸಿ ಅನುಗ್ರಹಿಸುತ್ತಾನೆ. **'ಮಾದಯತೀತಿ ಮತ್ಸ್ಯಃ'** ಭಕ್ತರಿಗೆ ಸ್ವರೂಪಾನಂದವನ್ನು ಅನುಗ್ರಹಿಸುತ್ತಾನೆ. ಸ್ವರೂಪಾನಂದವನ್ನು ಹೃದಯದಲ್ಲಿಯೇ ತುಂಬಿಕೊಂಡು ಕಿಲುಬುಗಾಸಿ ನಾಸೆಗೆ ಅಂಡಲೆಯುವ ಭಿಕ್ಷುಕನಂತೆ ದರಿದ್ರರಾಗಿದ್ದೇವೆ. ಚಿನ್ನದ ನಿಧಿಯುನ್ನು ಮನೆಯನೆಲದಲ್ಲಿ ತುಂಬಿಕೊಂಡು ಅದರ ಮೇಲೆ ಓಡಾಡುತ್ತಾ ಅದರ ಅರಿವಿಲ್ಲದೆ ದಾರಿದ್ರ್ಯದಿಂದ ಬದುಕುವ ಯಾಚಕರಂತೆ ನಮ್ಮ ಸ್ಥಿತಿಯಾಗಿದೆ. ಬಂದ ರೋಗಕ್ಕೆ ಚಿಕಿತ್ಸೆ ನೀಡುವ ಸಾಮರ್ಥ್ಯವುಳ್ಳ ಅಜ್ಜಿ ಮನೆಯಲ್ಲಿಯೇ ಇದ್ದರೂ ಪ್ರಜ್ಞಾಹೀನರಾಗಿ ಕಳಪೆ ವೈದ್ಯರ ಬಳಿ ಚಿಕಿತ್ಸೆಗೆ ಕಾಯುತ್ತಿದ್ದೇವೆ. ನಮ್ಮ ಹೃದಯದಲ್ಲಿಯೇ ಅಡಗಿದ ಹರಿಯನ್ನು ಹುಡುಕುತ್ತಿದ್ದೇವೆ. ಕಸ್ತೂರೀ ಮೃಗವು ತನ್ನ ನಾಭಿಯಲ್ಲಿಯೇ ಇರುವ ಸುಗಂಧ ಭರಿತವಾದ ಕಸ್ತೂರಿಯ ಅರಿವಿಲ್ಲದೆ ಅದೆಲ್ಲಿದೆ ಎಂದು ಅರಣ್ಯವನ್ನೆಲ್ಲ ಅರಸಿ ಸಾಗುತ್ತಿರುವಂತೆ. ಸ್ವರೂಪಾನಂದವನ್ನು ನಮ್ಮ ಹೃದಯದಲ್ಲಿಯೇ ಇರಿಸಿಕೊಂಡು ಕಂಡ ಕಂಡ ದೈವ–ಮನುಜರ ಬಳಿ ಮಂಡೆ ಒಡೆದುಕೊಳ್ಳುತ್ತಾ ಮೃತ್ಯುಕೂಪ ದಲ್ಲಿ ಬೀಳುತ್ತಿದ್ದೇವೆ. ಈ

ಗೋವುಗಳನ್ನು–ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.

ಮೃತ್ಯುವಿನಿಂದ ದಾಟಿಸುವ ಸಾಮರ್ಥ್ಯ ಮತ್ಸ್ಯನಿಗಲ್ಲದೆ ಬೇರ್ಯಾರಿಗೂ ಇಲ್ಲ.

**ನೀರಿನಲ್ಲಿ ಮತ್ಸ್ಯರಕ್ಷಿಸಿದ ಕಥೆ**

ರುಗ್ಮಿಣೀ ಪುತ್ರನಾದ ಪ್ರದ್ಯುಮ್ನನಿಂದ ತನಗೆ ಮರಣವೆಂದು ಶಂಬರಾಸುರನು ತಿಳಿದಿದ್ದ. ತನಗೆ ಮರಣ ಬರಬಾರದೆಂದು ಹುಟ್ಟಿದ ಕೂಸನ್ನು ಸಮುದ್ರಕ್ಕೆಸೆದ. ಸಮುದ್ರಕ್ಕೆಸೆದ ಕೂಸನ್ನು ಮತ್ಸ್ಯವೊಂದು ನುಂಗಿತು. ಬೆಸ್ತರ ಬಲೆಗೆ ಮಗುನುಂಗಿದ ಮತ್ಸ್ಯ ಸಿಕ್ಕಿತು. ಹರಿ ಸಂಕಲ್ಪದಂತೆ ಬೆಸ್ತನು ಮತ್ಸ್ಯದ ಉದರದಲ್ಲಿ ಸಿಕ್ಕಿದ ಮಗುವನ್ನು ತನ್ನ ದೊರೆಯಾದ ಶಂಬರನಿಗೇ ತಂದೊಪ್ಪಿಸಿದನು. ತನ್ನ ಮೃತ್ಯುವೇ ಮರಳಿ ತನ್ನ ಬಳಿಗೆ ಬಂದಿದೆ ಎಂದು ಅರಿಯದ ಶಂಬರ ಅದನ್ನು ಪೋಷಿಸಲು ತನ್ನ ಸೇವಕಿಯಾದ ಮಾಯಾವತಿಗೆ ನೀಡಿದ. ಮನ್ಮಥನ ಪತ್ನಿಯಾದ ರತಿಯೇ ಮಾಯಾವತಿಯಾಗಿದ್ದಳು. ಮಗುವಾದ ಪ್ರದ್ಯುಮ್ನನನ್ನು ಸಾಕಿ ಸಲಹಿ ಅಸ್ತ್ರ ವಿದ್ಯಾಪಾರಂಗತನನ್ನಾಗಿಸಿ ಶಂಬರನ ಸಂಹಾರವನ್ನು ಅವನ ಕೈಯಿಂದಲೇ ಮಾಡಿಸಿದಳು. ಮತ್ಸ್ಯನ ಅನುಗ್ರಹದಿಂದ ಪ್ರದ್ಯುಮ್ನ ನೀರಿನಲ್ಲಿ ಬಿದ್ದರೂ ಬದುಕಿ ಉಳಿದ. ಮತ್ಸ್ಯನ ದಯೆಯಿಂದ ವಂಚಿತನಾದ ಶಂಬರ ಮೃತ್ಯುಕೂಪಕ್ಕೆ ಬಿದ್ದು ಮೃತನಾದ.

ಈ ತಾತ್ವಿಕ ಕಥೆಯಲ್ಲಿ ತಿಳಿಯಬೇಕಾದ ಮಾನವೀಯ ಚಿಂತನೆ ಒಂದಿದೆ. ಮತ್ಸ್ಯಗಳಿಗೆ ಎರಡು ಉದರಗಳಿವೆ. ಒಂದು ಶರೀರಕ್ಕೆ ಬೇಕಾದ ಆಹಾರ ಸಂಗ್ರಹಣೆಗೆ. ಮತ್ತೊಂದು ತನ್ನಮರಿಗಳ ರಕ್ಷಣೆಗೆ. ಮತ್ಸ್ಯಗಳ ಮರಿಗಳು ಸಾವಿರಾರು ಇರುತ್ತವೆ. ಅವುಗಳೆಲ್ಲವನ್ನೂ ತಾಯಿಮತ್ಸ್ಯವು ತನ್ನ ಉದರದಲ್ಲಿಟ್ಟು ರಕ್ಷಿಸುತ್ತದೆ. ಬೇರೆ ಮತ್ಸ್ಯಗಳಿಂದ ಮಕ್ಕಳಿಗೆ ಆಪತ್ತು ಬರುವುದೆಂದು ತಿಳಿದ ಕೂಡಲೇ ತನ್ನ ಬಾಯನ್ನು ತೆರೆಯುತ್ತದೆ. ಎಲ್ಲ ಮತ್ಸ್ಯಗಳೂ ತಾಯಿಯ ಉದರದಲ್ಲಿದ್ದು ರಕ್ಷಣೆ ಹೊಂದುತ್ತವೆ. ಈ ಪ್ರಕೃತಿ ವಿಸ್ಮಯವನ್ನು ಕಂಡು ನಾವು ತಿಳಿಯಬೇಕಾದದ್ದು ಇಷ್ಟೇ, ಸಂಸಾರ ಸಾಗರದಲ್ಲಿ ನಮ್ಮನ್ನು ಸೃಷ್ಟಿಗೆ ತಂದವನು ಶ್ರೀಹರಿ. ಈ ಜಲಧಿಯಲ್ಲಿ ಬರುವ ಆಪತ್ತನ್ನು ಪರಿಹರಿಸಿ ಉದರದಲ್ಲಿಟ್ಟು ಮತ್ಸ್ಯವು ರಕ್ಷಿಸುವಂತೆ ಮತ್ಸ್ಯನಾಮಕನಾದ ಶ್ರೀಹರಿಯು ರಕ್ಷಿಸುತ್ತಾನೆ. ಇದಕ್ಕೆ ದೃಷ್ಟಾಂತವಾಗಿ ಶಂಬರ-ಪ್ರದ್ಯುಮ್ನರ ಕಥೆಯಿದೆ. ಇಲ್ಲವಾದಲ್ಲಿ ಮತ್ಸ್ಯದ ಉದರ ಸೇರಿದ ಪ್ರದ್ಯುಮ್ನ ಬದುಕಿದ್ದಾದರೂ ಹೇಗೆ? ಎಂಬ ಪ್ರಶ್ನೆಗೆ ಕರುಣೆಯಿಂದ ಸಲುಹುವ ಉದರದಲ್ಲಿ ಮತ್ಸ್ಯ ಹಾಕಿಕೊಂಡಿದ್ದರಿಂದ ಬದುಕಿದ, ಎಂಬುದೇ ಉತ್ತರವಾಗುತ್ತದೆ.

ಇಲ್ಲಿಯ ತನಕ ಜೀವನ ರಕ್ಷಣೆಗೆ ಮತ್ಸ್ಯನ ಉಪಕಾರ ಏನೆಂದು ನೋಡಿದ್ದೇವೆ. ಮುಂದೆ ದೇಹದ ರಕ್ಷಣೆಗೂ ಮತ್ಸ್ಯನ ಉಪಕಾರವೇ ಬೇಕೆಂಬುದನ್ನು ಮನನ ಮಾಡೋಣ.

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**

ಜಲಾಶ್ರಯಗಳಲ್ಲಿ ಸ್ನಾನಕ್ಕಿಳಿಯುವಾಗಲೇ ಕಾಲುಜಾರಿ ನೀರು ಪಾಲಾಗುವ ಸಾಧ್ಯತೆಗಳಿವೆ. ನೀರಿನ ವೇಗಕ್ಕೆ ಕೊಚ್ಚಿಹೋಗುವ ಭಯಗಳಿವೆ. ದೋಣಿಯಿಂದ ದಾಟುವಾಗ ಅಪಾಯವಿದೆ. ಕಂಡ ಕಂಡ ಜಲವನ್ನು ಪಾನ ಮಾಡುವಾಗ ಭಯವಿದೆ. ವರುಣನ ಭೃತ್ಯರು ಅಕಾಲದಲ್ಲಿ ಸ್ನಾನ ಮಾಡಲು ಹೊರಟ ನಂದಗೋಪನನ್ನು ವರುಣಲೋಕಕ್ಕೆ ಸೆಳೆದಂತೆ ತೀರ್ಥ ರಾಜನಿಗೆ ಮಾಡಿದ ಅಪಚಾರಕ್ಕೆ ಪಾಪಗಳ ಭಯವಿದೆ. ಇಂತಹ ಪ್ರಸಂಗಗಳಲ್ಲಿ **'ರಕ್ಷತು ಮತ್ಸ್ಯಮೂರ್ತಿಃ'** ಎನ್ನಬೇಕು.

ಅಥವಾ **'ಜಡೇಷು'** ಎಂದು ಪಾಠವನ್ನು ಇಟ್ಟುಕೊಂಡಾಗ ಹೊಸ ಅರ್ಥವು ಉದ್ಭವಿಸುತ್ತದೆ. ಅತ್ಯಂತ ಚುರುಕಿನ ಪ್ರಾಣಿ ಮತ್ಸ್ಯ. ಇದಕ್ಕೆ ಅತ್ಯಂತ ವಿರುದ್ಧನಾದವ ಮಾನವ. ಜಡನೀರಿನಲ್ಲಿನ ಮೀನು ನಿತ್ಯ ಕ್ರಿಯಾಶೀಲ. ಅದರಂತೆ ಜಡವಾದ ಶರೀರದಲ್ಲಿರುವ ಮತ್ಸ್ಯನಾಮಕ ಹರಿಯು ನಿತ್ಯ ಕ್ರಿಯಾಶೀಲ. ಜೀವನಿಗೆ ಆಲಸ್ಯ ಅಧಿಕ. ಅನೇಕ ಧಾರ್ಮಿಕ ಚಟುವಟಿಕೆಗಳಿಗೆ ಮನುಷ್ಯರ ಮನಸ್ಸು ಆಲಸ್ಯತೋರುತ್ತದೆ. ಕರ್ಮಗಳ ಬಗ್ಗೆ ಔದಾಸೀನ್ಯ ಮೂಡಿಸುತ್ತದೆ. ಸಂಧ್ಯಾವಂದನೆ–ದೇವರಪೂಜೆ–ಅತಿಥಿ ಸತ್ಕಾರಗಳಲ್ಲಿ ಆಧ್ಯಾತ್ಮಿಕ ಜಾಡ್ಯ ಒದಗಿದಾಗ ಮತ್ಸ್ಯನನ್ನು ಪ್ರಾರ್ಥಿಸ ಬೇಕು. ಉಸುಕಿನಿಂದ ಎಣ್ಣೆ ತೆಗೆಯುವುದು ಎಷ್ಟು ಅಸಾಧ್ಯವೋ ಅದರಂತೆ ಕೆಲವರಿಂದ ಸತ್ಕರ್ಮಗಳನ್ನು ಮಾಡಿಸುವುದು ಅಷ್ಟೇ ಕಷ್ಟ. ಭರ್ತೃಹರಿಯು ಒಂದೆಡೆ ಹೇಳುತ್ತಾನೆ.

'ಕಷ್ಟಪಟ್ಟರೆ ಒಂದು ವೇಳೆ ಮರಳಿನಲ್ಲಾದರೂ ಎಣ್ಣೆಯನ್ನು ತೆಗೆಯಬಹುದು. ಬಾಯಾರಿದವನು ಬಿಸಿಲುಗುದುರೆಯಲ್ಲಿಯೂ ನೀರನ್ನು ಪಡೆಯಬಹುದು. ಅಲೆದಾಡಿ ಹುಡುಕುತ್ತಿದ್ದರೆ ಎಂದಾದರೊಂದು ದಿನ ಮೊಲದಕೊಂಬೂ ಸಿಕ್ಕೀತು ಆದರೆ ಹಠಮಾರಿಗಳಾದ ಮೂರ್ಖ ಸೋಮಾರಿಗಳಿಂದ ಕೆಲಸ ಮಾಡಿಸಲಾಗದು'. **'ಸ್ವಭಾವೋ ದುರತಿಕ್ರಮಃ'** ಎಂದಂತೆ ಅವರ ಮನಸ್ಸನ್ನು ಬದಲಿಸಲಾಗದು, ಕೆಲವೊಮ್ಮೆ ಅಂಥವರ ಸಹವಾಸದಿಂದ ಸಜ್ಜನರಿಗೂ ಧಾರ್ಮಿಕ ಕ್ರಿಯೆಗಳಲ್ಲಿ ನಿರುತ್ಸಾಹ ಬರುವ ಸಾಧ್ಯತೆಗಳಿವೆ. ಇಂತಹ ಪ್ರಸಂಗದಲ್ಲಿ ಮತ್ಸ್ಯನ ಸ್ಮರಣೆ ಧ್ಯಾನಗಳನ್ನು ಆಚರಿಸಿದಲ್ಲಿ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಹುರುಪು ಉತ್ಸಾಹಗಳು ಜಾಗೃತವಾಗುವವು.

ಇದರಂತೆ ಜಡವಾದ ನೀರಿನಲ್ಲಿ ಇಳಿದಾಗ ನೀರಿನಲ್ಲಿನ ವಿಷಜಂತುಗಳ ಬಾಧೆ; ವರುಣ ಪಾಶವೆಂದರೆಜಾತರ ರೋಗ; ನೀರಿನ ವಿಭ್ರಮಗಳಿಂದ  ಉಂಟಾಗುವ ಭಯವನ್ನು ಮತ್ಸ್ಯನು ಪರಿಹರಿಸಲೆಂದು ಪ್ರಾರ್ಥಿಸಬೇಕು. ಇಂಥಹ ಮತ್ಸ್ಯರೂಪಿ ಶ್ರೀ ಹರಿಯು ಮತ್ಸ್ಯವೆಂಬ ಮೂಢರೂಪವನ್ನು ಧರಿಸಿದ್ದರೂ ಇತರ ಮತ್ಸ್ಯಗಳಂತಿರದೆ ವಿಲಕ್ಷಣವಾಗಿ

ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.

ಪೊಳೆವ ಕೋಡನ್ನು ಹೊಂದಿದ್ದಾನೆ. ಎಂದು ತಿಳಿಸಲು **'ಮತ್ಸ್ಯಮೂರ್ತಿಃ'** ಎಂದಿದ್ದಾರೆ. ಗರುಡಾರೂಢನಾದ ನಾರಾಯಣನನ್ನು ಧೇನಿಸುತ್ತಾ ಮತ್ಸ್ಯೈಕ್ಯವನ್ನು ಚಿಂತಿಸಬೇಕು.

ಮತ್ಸ್ಯನ ಅನುಗ್ರಹ ಮನುವಿಗೆ ಮಾತ್ರ ಸೀಮಿತವಾಗಿಲ್ಲ. ಮನುಕುಲದ ಮಾನವರಿಗೆಲ್ಲಾ ಮತ್ಸ್ಯನ ಅನುಗ್ರಹವಾಗಬೇಕು.

ಸಂಸಾರವೆಂಬ ಸಮುದ್ರದಲ್ಲಿ ಜೀವನವೆಂಬ ನಾವೆಯಲ್ಲಿ ನಾವು ಕುಳಿತಿದ್ದೇವೆ. ಈ ನಾವೆಯು ಎಲ್ಲಿಯೂ ಮಗುಚಬಹುದು. ಇದು ತಾಪತ್ರಯಗಳೆಂಬ ಊರ್ಮಿಗಳಿಂದ ಘಾಸಿಗೊಳ್ಳದೆ ಸುರಕ್ಷಿತವಾಗಿ ಗುರಿತಲುಪಬೇಕಾದರೆ ಮತ್ಸ್ಯನ ಸಹಾಯಬೇಕು. ಧಾನ್ಯದ ದೋಣಿಯನ್ನು ಮನುವು ಮತ್ಸ್ಯನ ಕೋರೆಗೆ ಸಿಕ್ಕಿಸಿದ. ಕ್ಷೇಮವಾಗಿ ಉಳಿದ. ಅದರಂತೆ ನಾವೂ ಸಹ ಜೀವನ ನಾವೆಗೆ ಭಗವಂತನ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕು. ಅವನು ನಮಗೆ ಜೊತೆಯಾದರೆ ನಮಗೆ ಚಿಂತೆಯೇ ಇಲ್ಲ. ನಮ್ಮ ಗುರಿಯನ್ನು ಮುಟ್ಟುವುದು ಖಂಡಿತ.

ಮತ್ಸ್ಯನ ರಕ್ಷಣೆಯಿಂದ ಸಂಸಾರದ ಕಕ್ಷೆಯನ್ನು ದಾಟಬೇಕು. ಅಕ್ಷಯಫಲಕ್ಕಾಗಿ ಈ ರಕ್ಷಾಮಂತ್ರವನ್ನು ಜಪಿಸಬೇಕು.

**'ಓಂ ನಮೋ ಭಗವತೇ ಮುಖ್ಯತಮಾಯ ನಮಃ ಸತ್ತ್ವಾಯ ಪ್ರಾಣಾಯೌಜಸೇ ಸಹಸೇ ಬಲಾಯ ಮಹಾಮತ್ಸ್ಯಾಯ ನಮಃ'** ಎಂದು. **(ಸಶೇಷ)**

---

(6ನೇ ಪುಟದಿಂದ....)

ಧೃತರಾಷ್ಟ್ರನನ್ನೂ ಒಬ್ಬ ಹೆಣ್ಣಿನ ಅವಮಾನಕ್ಕೆ ಹೊಣೆಯೆಂದು ಬಡಿದ. ಹಾಗೂ ಅದೇ ಹೆಣ್ಣಿಗೆ ಅವಮಾನವಾಗುತ್ತಿರುವುದನ್ನು ವಿರೋಧಿಸಿದ ವಿದುರನನ್ನು, ಶೂದ್ರನಾದರೂ ಕೈ ಹಿಡಿದು ಎತ್ತಿದ. **'ಯತ್ರ ನಾರ್ಯಸ್ತು ಪೂಜ್ಯಂತೇ'** ಎಂದು ಶಾಸ್ತ್ರದಲ್ಲಿ ಎಚ್ಚರಿಕೆ ಕೊಟ್ಟರು. ನಮ್ಮ ಸಮಾಜದಲ್ಲಿ ಹೆಣ್ಣಿನಿಂದ ತಿದ್ದುಕೊಳ್ಳುವ ಪ್ರಸಂಗ ಬಂದರೆ ಅದು ಗಂಡಿಗೆ ನಾಚಿಕೆಯ ವಿಷಯವಲ್ಲದೆ ಭೂಷಣವೆನ್ನುತ್ತಾರೆ. ಆದ್ದರಿಂದ ಸಮಸ್ಯೆಯನ್ನು ಮನೆಮಂದಿಯರೊಡಗೂಡಿ ಚಿಂತನೆ ಮಾಡಬೇಕು. ಮಹಾಪತಿವ್ರತೆಯಾದ ಗಾಂಧಾರಿಯು ಕೂಡ ಒಂದು ಪ್ರಸಂಗದಲ್ಲಿ ತನ್ನ ಮಕ್ಕಳು ಒಳ್ಳೆಯ ಮಾತು ಕೇಳದಿರುವುದನ್ನು ಕಂಡು, ಸ್ವಯಂ ತನ್ನ ಗಂಡನನ್ನು ತಿದ್ದಬೇಕೆಂಬ ಹಂತಕ್ಕೆ ಬಂದಿದ್ದಳು. ಅಂತಹ ಗಾಂಧಾರಿಯೊಡನೆ ಧೃತರಾಷ್ಟ್ರನು ಮೊದಲೇ ತನ್ನ ಮಕ್ಕಳ ವಿಷಯದಲ್ಲಿ ಚಿಂತನೆ ಮಾಡಿದ್ದಲ್ಲಿ ಪ್ರಾಯಶಃ ರಕ್ತ ಕ್ರಾಂತಿಯಾಗುವುದನ್ನು ತಡೆಯಬಹುದಿತ್ತು. **(ಮುಂದುವರಿಯುವುದು)**

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ**

# ಡಾ । ಪಿ. ಜಯರಾಮ ಬಾಗಿಲ್ತಾಯರ ನಿಧನ

## ಪೂಜ್ಯ ಪಲಿಮಾರು ಶ್ರೀಪಾದರ ಸಂತಾಪ

ಪಲಿಮಾರಿನ ಶ್ರೀಯುತ ಬಾಗಿಲ್ತಾಯರ ನಿಧನದ ವಾರ್ತೆ ಕೇಳಿ ಆಘಾತವಾಯಿತು. ಶ್ರೀಯುತರು ನಮ್ಮ ಪಲಿಮಾರು ಮಠದ ಶಿಷ್ಯರಾಗಿದ್ದ ಮಠದ ವಿಶೇಷ ಅಭಿಮಾನಿಗಳಾಗಿದ್ದರು. ಪೂಜ್ಯ ಗುರುಗಳಾದ ವಿದ್ಯಾಮಾನ್ಯರ ಕಾಲದಿಂದಲೂ ಮಠಕ್ಕೆ ವಿಶೇಷ ಸೇವೆಗಳನ್ನು ಸಲ್ಲಿಸುತ್ತಿದ್ದರು. ಕಳೆದ ನಮ್ಮ ಪರ್ಯಾಯ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ಪರ್ಯಾಯ ಅತ್ಯಂತ ವೈಭವದಿಂದ ನಡೆಯುವಂತೆ ಶ್ರಮಿಸಿದರು. ಬೆಂಗಳೂರಿನಲ್ಲಿ ಮಲ್ಲೇಶ್ವರದಲ್ಲಿ ರಾಘವೇಂದ್ರ ಮಠವನ್ನು ಪಲಿಮಾರುಮಠಕ್ಕೆ ಕೊಡಿಸಿದ್ದಲ್ಲದೆ ಅದರ ಸರ್ವತೋಭಿವೃದ್ಧಿಗೆ ಕಾರಣರಾಗಿದ್ದರು. ಹಾಗೆಯೆ ತಮ್ಮ ಹುಟ್ಟೂರಾದ ಪಲಿಮಾರಿನ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ದಾರ ಬ್ರಹ್ಮಕಲಶಗಳನ್ನು ಅಭೂತಪೂರ್ವವಾಗಿ ನೆರವೇರಿಸಿದರು. ಅಲ್ಲದೆ ಅಲ್ಲಿಯ ವಿಷ್ಣುಮೂರ್ತಿ ದೇವಸ್ಥಾನ ಹಾಗೂ ಚಾವಡಿ ಮಹಾಲಿಂಗೇಶ್ವರ ದೇವಸ್ಥಾನಗಳ ಜೀರ್ಣೋದ್ಧಾರವನ್ನು ಮಾಡಲು ಸಂಕಲ್ಪಿಸಿದ್ದರು. ಮಠದ ವಿಶ್ವಸಂಜೀವೀನಿ ಟ್ರಸ್ಟ್ ಮೂಲಕ ನಡೆಯುತ್ತಿರುವ ಸಂಚಾರಿ ವೈದ್ಯಕೀಯ ನೆರವಿಗೆ ಒಂದು ವಾಹನವನ್ನು ನೀಡಿದ್ದರು. ಹೀಗೆ ಹತ್ತು ಹಲವು ರೀತಿಯಿಂದ ಮಠದ ಧಾರ್ಮಿಕ ಸಾಮಾಜಿಕ ಕಾರ್ಯಗಳಿಗೆ ಪೂರ್ಣ ಸಹಕಾರವನ್ನು ನೀಡುತ್ತಿದ್ದ ಶ್ರೀಯುತರ ನಿಧನ ನಮಗೆ ತುಂಬಲಾರದ ಹಾನಿ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ದೇವರನ್ನು ಪ್ರಾರ್ಥಿಸಿದ್ದಾರೆ. ಕುಟುಂಬದವರಿಗೆ ದುಃಖವನ್ನು ಸಹಿಸುವ ಶಕ್ತಿ ನೀಡಲಿ ಎಂದು ಶ್ರೀಪಾದರು ಸಂತಾಪವ್ಯಕ್ತ ಪಡಿಸಿದ್ದಾರೆ.

**ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ**

# ಜೀವನಯಜ್ಞ

## ಸ್ಥೂಲಶರೀರಚಿಂತನಯಜ್ಞ

ಸಂಕಲನ: ಸುನಂದಕೀ

ಮೂಲಾಧಾರದಲ್ಲಿ 1) ನಾಲ್ಕು ದಳದ, ರಕ್ತವರ್ಣದ ಕಮಲದಲ್ಲಿ ತ್ರಿಕೋಣ ವಹ್ನಿಮಂಡಲದಲ್ಲಿ ಪ್ರದ್ಯುಮ್ನನೂ 2) ನಾಭಿಯಲ್ಲಿ ಆರುದಳದ ರಕ್ತವರ್ಣಕಮಲದಲ್ಲಿ ಷಟ್ಕೋಣ ವಾಯುಮಂಡಲದಲ್ಲಿ ಸಂಕರ್ಷಣನೂ 3) ಹೃದಯದಲ್ಲಿ ಅಷ್ಟದಳದ ರಕ್ತವರ್ಣಪದ್ಮದಲ್ಲಿ ದ್ವಾದಶಕೋಣ ಸೂರ್ಯಮಂಡಲದಲ್ಲಿ ವಾಸುದೇವನೂ, 4) ತಾಲುಸ್ಥಾನದ ದ್ವಿದಳದ ಶುಕ್ಲಪದ್ಮದಲ್ಲಿ ವರ್ತುಲವಾದ ಚಂದ್ರಮಂಡಲದಲ್ಲಿ ಅನಿರುದ್ಧನೂ 5) ಭ್ರೂಮಧ್ಯದಲ್ಲಿ ಚತುರ್ದಳ ಶುಕ್ಲ ಪದ್ಮದಲ್ಲಿ ತ್ರಿಕೋಣ ವಹ್ನಿಮಂಡಲದಲ್ಲಿ ನಾರಾಯಣನೂ 6) ಶಿರಸ್ಸಿನ ದ್ವಾದಶದಳ ಶುಕ್ಲಪದ್ಮದಲ್ಲಿ ವರ್ತುಲ ಚಂದ್ರಮಂಡಲದಲ್ಲಿಯೂ ನಾರಾಯಣನು ಇರುತ್ತಾನೆ. ಶರೀರಧಾರಕವಾದ ರೂಪಗಳಲ್ಲಿ ಐದನೆಯದಾದ ರೂಪವು ಸುಷುಮ್ನಾಧಾರಕದಲ್ಲಿಯೂ ಹೇಳಲ್ಪಟ್ಟಿರುತ್ತದೆ.

ಆ ಸುಷುಮ್ನಾ ನಾಡಿಯು ವಜ್ರಿಕಾ, ಆರ್ಯಕಾ, ಪ್ರಕಾಶಿನೀ, ವೈದ್ಯುತಾ, ಬ್ರಹ್ಮನಾಡಿ ಎಂದು ಐದು ವಿಧ. ಸುಷುಮ್ನದ ಪೃಷ್ಠಭಾಗದ ವಜ್ರಿಕೆಯಲ್ಲಿ ಹರಿದ್ವರ್ಣ ವಿಶಿಷ್ಟ ಪ್ರದ್ಯುಮ್ನನೂ, ಎಡಭಾಗದಲ್ಲಿ ಆರ್ಯಕಾನಾಡಿಯಲ್ಲಿ ನೀಲವರ್ಣ ಅನಿರುದ್ಧನೂ, ಮುಂಭಾಗದಲ್ಲಿ ಪ್ರಕಾಶಿನೀನಾಡಿಯಲ್ಲಿ ಶುಕ್ಲವರ್ಣ ವಾಸುದೇವನೂ, ದಕ್ಷಿಣಭಾಗದ ವೈದ್ಯುತಾನಾಡಿಯಲ್ಲಿ ಪಿಂಗಲವರ್ಣ ಸಂಕರ್ಷಣನೂ, ಮಧ್ಯದಲ್ಲಿ ಬ್ರಹ್ಮನಾಡಿಯಲ್ಲಿ ರಕ್ತವರ್ಣ ನಾರಾಯಣನೂ ಇರುವರು. ಹೀಗೆ ಇತರ ನಾಡಿಗಳನ್ನು ಪೋಷಣ ಮಾಡಲು ಅಲ್ಲಲ್ಲಿ ಭಗವಂತನು ಇರುವನು.

ಹೇಗೆಂದರೆ –ಸುಷುಮ್ನ ನಾಡಿಯ ನಾಲ್ಕು ದಿಕ್ಕುಗಳಲ್ಲಿ ನೂರು ನಾಡಿಗಳಿರುತ್ತವೆ. ಆ ನಾಡಿಗಳಲ್ಲಿ ನಾರಾಯಣಾದಿ ನೂರುರೂಪಗಳು ಇರುತ್ತವೆ. ನೂರು ನಾಡಿಗಳಲ್ಲಿ ವಜ್ರಿಕಾ, ಇಢ್ರಾಧಾರಿಣೀ, ಪಿಂಗಳಾ ಎಂದು ನಾಲ್ಕು ಪ್ರಧಾನ ನಾಡಿಗಳು. ಉಳಿದವುಗಳು ಸುಷುಮ್ನ ನಾಡಿಗೆ ನಾಲ್ಕು ದಿಕ್ಕಿನಲ್ಲಿರುತ್ತವೆ. ಪಶ್ಚಿಮದ ವಜ್ರಿಕೆಯಲ್ಲಿ ಪ್ರದ್ಯುಮ್ನನೂ, ಎಡಭಾಗದ ಇಡಾನಾಡಿಯಲ್ಲಿ ಅನಿರುದ್ಧನೂ, ಮುಂಭಾಗದ ಧಾರಿಣೀನಾಡಿಯಲ್ಲಿ ವಾಸುದೇವನೂ, ದಕ್ಷಿಣಭಾಗದ ಪಿಂಗಳೆಯಲ್ಲಿ ಸಂಕರ್ಷಣನೂ ಇರುವರು. ಹಾಗೆಯೇ ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿ ಬೃಹತೀಸಹಸ್ರವಾಚ್ಯಗಳಾದ 72ಸಾವಿರ ರೂಪಗಳಿರುತ್ತವೆ.

ಆ ಬೃಹತೀಸಹಸ್ರ 36ಸಾವಿರ ರೂಪಗಳು ಸ್ವರಾಕ್ಷರ ಪ್ರತಿಪಾದ್ಯಗಳು. ಅಷ್ಟೇ ವ್ಯಂಜನಾಕ್ಷರ

ರಾಮಾಯಣ–ಮಹಾಭಾರತ–ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ.

ವಾಚ್ಯರೂಪಗಳೂ ಇರುತ್ತವೆ. ಅದರಲ್ಲಿ ಸ್ವರಾಕ್ಷರ ವಾಚ್ಯ 36,000 ರೂಪಗಳು ದಕ್ಷಿಣಭಾಗದ 36,000 ನಾಡಿಗಳಲ್ಲಿಯೂ, ಹಾಗೂ 36,000 ವ್ಯಂಜನಾಕ್ಷರ ವಾಚ್ಯರೂಪಗಳು ಎಡಭಾಗದ 36,000 ನಾಡಿಗಳಲ್ಲಿರುತ್ತವೆ. ಈ ರೀತಿ 72ಸಾವಿರ ನಾಡಿಗಳಿಂದ ಹೊರಟ ಅವಾಂತರ ನಾಡಿಗಳಲ್ಲಿ 72ಸಾವಿರ ರೂಪಗಳಿಂದ ಪ್ರಾದುರ್ಭೂತರೂಪಗಳೂ ಇರುತ್ತದೆ. ಅಷ್ಟೆ ಅಲ್ಲದೆ ಭಗವಂತನು ನಮ್ಮ ಶರೀರದ ಒಂದೊಂದು ಅವಯವದಲ್ಲಿಯೂ ಒಂದೊಂದು ರೂಪದಿಂದ ಇದ್ದು ನಮ್ಮ ಸ್ಥೂಲಶರೀರವನ್ನು ಪೋಷಿಸುತ್ತಿರುವನು. ಅದರ ಚಿಂತನೆ ಈ ರೀತಿ ಇದೆ.

| **ಸ್ಥಾನಗಳು** | **ಭಗವದ್ರೂಪಗಳು** |
|---|---|
| ಶಿರಸ್ಸಿನ ಕಪಾಲದ ಮೇಲ್ಭಾಗ | ವಾಸುದೇವ |
| ಕೇಶಮೂಲ | ಸಂಕರ್ಷಣ |
| ಶಿರಸ್ಸು | ನಾರಾಯಣ |
| ಲಲಾಟ(ಹಣೆ_ | ಕೇಶವ |
| ಭ್ರೂದ್ವಯ ಹಾಗೂ ಭ್ರೂಮಧ್ಯ | ನಾರಾಯಣ |
| ಕಪೋಲದ್ವಯ | ಸಂಕರ್ಷಣ |
| ಉತ್ತರೋಷ್ಠ (ಮೇಲ್ತುಟಿ) | ವಾಸುದೇವ |
| ಅಧರೋಷ್ಠ (ಕೆಳತುಟಿ) | ಸಂಕರ್ಷಣ |
| ದಂತಪಂಕ್ತಿದ್ವಯ (ಹಲ್ಲಿನಸಾಲು) | ಪ್ರದ್ಯುಮ್ನ |
| ಕಂಠಕೂಬರ | ಗೋವಿಂದ |
| ದಕ್ಷಿಣಕಂಧರ | ತ್ರಿವಿಕ್ರಮ |
| ವಾಮಕಂಧರ | ಹೃಷೀಕೇಶ |
| ಕಕುತ್ | ದಾಮೋದರ |
| ಪೃಷ್ಠಭಾಗ | ಪ್ರದ್ಯುಮ್ನ |
| ದಕ್ಷಿಣಬಾಹುಮೇಲ್ಭಾಗ | ವಾಸುದೇವ |
| ದಕ್ಷಿಣಬಾಹು ಕೆಳಭಾಗ | ಅನಿರುದ್ಧ |
| ವಾಮಬಾಹುಮೇಲ್ಭಾಗ | ಸಂಕರ್ಷಣ |
| ವಾಮಬಾಹು ಕೆಳಭಾಗ | ಪ್ರದ್ಯುಮ್ನ |
| ಹಸ್ತದ ರೇಖೆಗಳು | ವಾಸುದೇವಾದಿ ರೂಪಚತುಷ್ಟಯಗಳು |
| ಹಸ್ತದ ಬೆರಳುಗಳು | ನಾರಾಯಣಾದಿ ರೂಪ ಪಂಚಕದ್ವಯ |
| ನಖಗಳು | ನಾರಾಯಣಾದಿ ರೂಪ ಪಂಚಕದ್ವಯ |

**ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.**

| | |
|---|---|
| ಉರಸ್ಸು | ಅನಿರುದ್ಧ |
| ಸ್ತನದ್ವಯ | ನರಸಿಂಹ |
| ಉದರ | ನಾರಾಯಣ |
| ದಕ್ಷಿಣಕುಕ್ಷಿ | ವಿಷ್ಣು |
| ವಾಮಕುಕ್ಷಿ | ವಾಮನ |
| ನಾಭಿ | ನರಸಿಂಹ |
| ಲಲಾಟ, ಉದರ, ಕಂಠಗಳಲ್ಲಿರುವ ವಲಿತ್ರಯ | ರಾಮ, ಕೃಷ್ಣ, ಕಪಿಲ |
| ಬಸ್ತಿ | ನರಸಿಂಹ |
| ವೃಷಣ | ವಾಸುದೇವ |
| ಜಂಘಾದ್ವಯ | ಪ್ರದ್ಯುಮ್ನ |
| ಅಂಘ್ರಿದ್ವಯ | ಸಂಕರ್ಷಣ |
| ಪಾದರೇಖೆ | ವಾಸುದೇವಾದಿ ರೂಪ ಚತುಷ್ಟಯ |
| ಪಾದಾಂಗುಲಿಗಳು | ನಾರಾಯಣಾದಿ ರೂಪ ಪಂಚಕದ್ವಯ |
| ಪಾದನಖಗಳು | ನಾರಾಯಣಾದಿ ರೂಪ ಪಂಚಕದ್ವಯ |
| 3 1/2 ಕೋಟಿ ರೋಮಗಳು | 3 1/2 ಕೋಟಿರೂಪಗಳಿಂದಪ್ರದ್ಯುಮ್ನನು |
| ತ್ವಕ್ | ಸಂಕರ್ಷಣ |
| ಚರ್ಮ | ನಾರಾಯಣ |
| ಮಾಂಸ | ವರಾಹ |
| ರುಧಿರ | ನಾರಾಯಣ |
| ಮೇದಸ್ಸು | ಅನಿರುದ್ಧ |
| 360 ಮಜ್ಜ | 360 ರೂಪಗಳಿಂದ ಸಂಕರ್ಷಣ |
| 360 ಅಸ್ಥಿ | 360 ರೂಪಗಳಿಂದ ಅನಿರುದ್ಧ |
| 360 ಪರ್ವಗಳು | 360 ರೂಪಗಳಿಂದ ಅನಿರುದ್ಧ |
| ಅನ್ನಮಯಕೋಶ | ಅನಿರುದ್ಧ |
| ಪ್ರಾಣಮಯಕೋಶ | ಪ್ರದ್ಯುಮ್ನ |
| ಮನೋಮಯಕೋಶ | ಸಂಕರ್ಷಣ |
| ವಿಜ್ಞಾನಮಯ ಕೋಶ | ವಾಸುದೇವ |
| ಆನಂದಮಯ ಕೋಶ | ನಾರಾಯಣ |

ಈ ರೀತಿ ಸ್ಥೂಲದೇಹದ ಅವಯವಗಳಲ್ಲಿ ಭಗವಂತನು ನೆಲೆಸಿರುವನು. ★

**ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.**

# ಮಾಯಾವಾದಿಗಳಿಗೂ ಶೂನ್ಯವಾದಿಗಳಿಗೂ ಸ್ವಲ್ಪವೂ ವ್ಯತ್ಯಾಸವಿಲ್ಲ

–ಅನಂತಕೃಷ್ಣಾಚಾರ್ಯ,ಉಡುಪಿ

ಆಚಾರ್ಯರು ತಮ್ಮ ಉಪನ್ಯಾಸಭಾರತಿಯನ್ನು ಮುಂದುವರಿಸುತ್ತ–ಶೂನ್ಯವಾದಿಗಳಿಗೆ ಹಾಗೂ ಮಾಯಾವಾದಿಗಳಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲವೆಂದಾಗ ಸಿಡಿಮಿಡಿಗೊಂಡ ಮಾಯಾವಾದಿಗಳು, 'ನಮ್ಮನ್ನು ಶೂನ್ಯವಾದಿಗಳಾದ ಬೌದ್ಧರೊಡನೆ ಹೋಲಿಸಬೇಡಿ. ಅವರು ಅವೈದಿಕರು. ನಾವಾದರೋ ವೈದಿಕರು. ವೇದವನ್ನು ಪ್ರಮಾಣವೆಂದು ಒಪ್ಪುವವರು. ಮಂತ್ರ–ಬ್ರಾಹ್ಮಣ–ಉಪನಿಷತ್ ಎಂದು ಮೂರು ವಿಧವಾದ ವೇದದಲ್ಲಿ ಉಪನಿಷತ್ತನ್ನು ತತ್ವಾವೇದಕ (ಸತ್ಯವನ್ನು ತಿಳಿಸುತ್ತಿದೆ) ಎಂದು ಒಪ್ಪುತ್ತೇವೆ. ಕೇವಲ ಕರ್ಮಕಾಂಡವನ್ನು ಪ್ರತಿಪಾದಿಸುವ ಮಂತ್ರ–ಬ್ರಾಹ್ಮಣವನ್ನು ಮಾತ್ರ ಅತತ್ವಾವೇದಕವೆಂದು ಹೇಳುತ್ತೇವೆ. ಬೌದ್ಧರಾದರೋ ಸಂಪೂರ್ಣವೇದವನ್ನೇ ಸುಳ್ಳೆನ್ನುತ್ತಾರೆ. ಹೀಗೆ ನಮಗೂ ಬೌದ್ಧರಿಗೂ ಬಹಳ ವ್ಯತ್ಯಾಸವಿದೆ' ಎಂದು ತಮ್ಮನ್ನು ಸಮರ್ಥಿಸಿಕೊಳ್ಳಬಹುದು.

ಇಂತಹ ಮಾಯಾವಾದಿಗಳನ್ನು ನಾವು ಪ್ರಶ್ನಿಸುತ್ತೇವೆ. ಮೂರು ವಿಧವಾದ ವೇದಗಳಲ್ಲಿ ಉಪನಿಷತ್ತುಗಳು ಮಾತ್ರ ತತ್ವಾವೇದಕ (ಸತ್ಯವನ್ನು ತಿಳಿಸುತ್ತಿದೆ) ಎಂಬುದು ನಿನ್ನ ಅಭಿಪ್ರಾಯವಷ್ಟೆ. ಮಾಯಾವಾದದ ಪ್ರಕಾರ ತತ್ವ ಅಥವಾ ಸತ್ಯವಾದ ವಸ್ತು ಕೇವಲ ಬ್ರಹ್ಮ ಮಾತ್ರ. ಆ ಬ್ರಹ್ಮವಾದರೋ ಅವಾಚ್ಯನಾದ್ದರಿಂದ ಅವರ್ಣನೀಯ ಎಂಬುದು ನಿನ್ನ ಸಿದ್ಧಾಂತ. ಅಂದರೆ ಅವನನ್ನು ಶಬ್ದಗಳು ವರ್ಣಿಸಲು ಸಾಧ್ಯವಿಲ್ಲವಾದ್ದರಿಂದ ಅವನು ಮಾತಿನಿಂದ ಬಣ್ಣಿಸಲಾಗದವನು ಎಂಬುದು ನಿನ್ನ ಅಭಿಪ್ರಾಯ. ಯಾವ ಮಾತಿನಿಂದಲೂ ಬಣ್ಣಿಸಲಾಗದ ಬ್ರಹ್ಮನನ್ನು ಉಪನಿಷತ್ತಿನ ಮಾತುಗಳಾದರೂ ಹೇಗೆ ಬಣ್ಣಿಸೀತು? ಬಣ್ಣಿಸಲು ಸಾಧ್ಯವೇ ಇಲ್ಲ. ಆದ್ದರಿಂದ ಉಪನಿಷತ್ತು ತತ್ವಾವೇದಕ (ಸತ್ಯವನ್ನು ತಿಳಿಸುತ್ತದೆ) ಎಂಬುದು ಬರಿಯ ಬೊಗಳೆ ಮಾತು. ವೈದಿಕರಾದ ಜನರನ್ನು ಮೋಸಗೊಳಿಸುವ ತಂತ್ರ.

ಮಂತ್ರ–ಬ್ರಾಹ್ಮಣಗಳು ಅತತ್ವಾವೇದಕ (ಸುಳ್ಳನ್ನು ತಿಳಿಸುತ್ತವೆ) ವಾದ್ದರಿಂದ ಅಪ್ರಮಾಣವೆಂದ ನೀನು ಉಪನಿಷತ್ತುಗಳು ತತ್ವಾವೇದಕ (ಸತ್ಯವನ್ನು ತಿಳಿಸುತ್ತದೆ) ಎಂದರೂ ನಿನ್ನ ಪ್ರಕಾರ ತತ್ವ (ಸತ್ಯ)ವಾದ ಬ್ರಹ್ಮವನ್ನು ಯಾವ ಮಾತಿನಿಂದಲೂ ಹೇಳಲು ಸಾಧ್ಯವಿಲ್ಲವಾದ್ದರಿಂದ ಉಪನಿಷತ್ತಿಗೆ ಹೇಳಲು ವಿಷಯವೇ ಇಲ್ಲದಂತಾಗಿ ಅಪ್ರಮಾಣವೆಂದೇ ಆಯಿತು. ಹೀಗೆ ಸಂಪೂರ್ಣ ವೇದವೇ ಅಪ್ರಮಾಣವಾಯಿತು. ಬೌದ್ಧರು ಇದನ್ನೇ ಹೇಳುವುದಷ್ಟೆ

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ.

ಬೌದ್ಧರಿಗೂ ನಿನಗೂ ಮತ್ತೇನು ವ್ಯತ್ಯಾಸವಿದೆ.

ಮಾಯಾವಾದಿ ಹೀಗೆ ಹೇಳಬಹುದು-

ಬ್ರಹ್ಮನನ್ನು ಮಾತಿನಿಂದ ನೇರವಾಗಿ ಬಣ್ಣಿಸಲಾಗದಿದ್ದರೂ ಹೇಳಿದ್ದರ ಮೂಲಕ ಹೇಳದಿದ್ದನ್ನು ಗ್ರಹಿಸುವ ಮೂರು ಬಗೆಯ ಲಕ್ಷಣಾವೃತ್ತಿಗಳ ಮೂಲಕ ಉಪನಿಷತ್ ಮಾತುಗಳು ಬ್ರಹ್ಮನನ್ನು ತಿಳಿಸುತ್ತವೆ. ಜಹಲ್ಲಕ್ಷಣಾ, ಅಜಹಲ್ಲಕ್ಷಣಾ, ಜಹದಜಹಲ್ಲಕ್ಷಣಾ ಇವೇ ಮೂರು ಲಕ್ಷಣಾವೃತ್ತಿಗಳು.

**ಜಹಲ್ಲಕ್ಷಣಾ**-ಶಬ್ದಕ್ಕೆ ಮುಖ್ಯಾರ್ಥವನ್ನು ಬಿಟ್ಟು ಬೇರೆಯೇ ಅರ್ಥವನ್ನು ಹೇಳುವುದು. ಉದಾಹರಣೆಗೆ: **'ಚೌಕಿ ಎದ್ದಿತು'** ಎಂಬಂತೆ. ಇಲ್ಲಿ ಚೌಕಿ ಎಂದರೆ ಕಟ್ಟಡವನ್ನು ಕುರಿತು ಹೇಳುವುದಲ್ಲ. ಚೌಕಿಯಲ್ಲಿ ಊಟಕ್ಕೆ ಕುಳಿತವರನ್ನು ಎದ್ದರೆಂದು ಹೇಳುವುದು. ಇದರಂತೆ **'ಯತೋ ವಾ ಇಮಾನಿ ಭೂತಾನಿ ಜಾಯಂತೇ'** ಮುಂತಾದ ಉಪನಿಷತ್ ವಾಕ್ಯಗಳಲ್ಲಿ ಮಿಥ್ಯಾಭೂತವಾದ ಜಗತ್ತಿನ ಜನಕತ್ವವೇ ಮುಂತಾದುವುಗಳನ್ನು ಬಿಟ್ಟು ಕೇವಲ ಬ್ರಹ್ಮಸ್ವರೂಪವನ್ನು ಮಾತ್ರ ಗ್ರಹಿಸುವುದು.

**ಅಜಹಲ್ಲಕ್ಷಣಾ**-ಶಬ್ದಕ್ಕೆ ಮುಖ್ಯಾರ್ಥವನ್ನು ಇಟ್ಟುಕೊಂಡು ಬೇರೆ ಅರ್ಥವನ್ನೂ ಗ್ರಹಿಸುವುದು. ಉದಾಹರಣೆಗೆ- ತಾಯಿ ಮಗನಿಗೆ **'ಕಾಗೆಯಿಂದ ಆಹಾರವನ್ನು ರಕ್ಷಿಸು'** ಎಂಬಂತೆ. ಇಲ್ಲಿ ಕಾಗೆ ಎಂದರೆ ಕಾಗೆ ಮಾತ್ರವಲ್ಲ. ನಾಯಿ, ಬೆಕ್ಕು ಮುಂತಾದುವುಗಳಿಂದಲೂ ಆಹಾರವನ್ನು ರಕ್ಷಿಸು ಎಂದರ್ಥ. ಇದರಂತೆಯೇ **'ಸತ್ಯಂಜ್ಞಾನಮನಂತಂ ಬ್ರಹ್ಮ'** ಎಂಬಲ್ಲಿ ಸತ್ಯ ಎಂದರೆ ಅಸತ್ಯವಲ್ಲ. ಜ್ಞಾನವೆಂದರೆ ಅಜ್ಞಾನವಲ್ಲ. ಹೀಗೆ ಗ್ರಹಿಸುವುದು.

**ಜಹದಜಹಲ್ಲಕ್ಷಣಾ**- ಶಬ್ದದ ಅರ್ಥದಲ್ಲಿ ಸ್ವಲ್ಪವನ್ನು ಬಿಟ್ಟು ಸ್ವಲ್ಪವನ್ನು ಗ್ರಹಿಸುವುದು. ಉದಾಹರಣೆಗೆ- **'ತತ್ವಮಸಿ'** ಎಂಬ ವಾಕ್ಯದಲ್ಲಿ ತತ್- ಆ ಬ್ರಹ್ಮ ತ್ವಂ ಅಸಿ-ನೀನಾಗಿರುವಿ ಎಂದರ್ಥವಾಗುತ್ತದೆ. ಆದರೆ ಇದು ಸರಿಯಲ್ಲ. ಏಕೆಂದರೆ ಬ್ರಹ್ಮ ಸರ್ವಜ್ಞ; ಜೀವ ಅಲ್ಪಜ್ಞ, ಇವರಿಬ್ಬರಿಗೂ ಐಕ್ಯ ಹೇಗೆ? ಅದಕ್ಕೆ ಬ್ರಹ್ಮನಲ್ಲಿ ಸರ್ವಜ್ಞತ್ವವನ್ನು ಬಿಟ್ಟು ಜೀವನಲ್ಲಿ ಅಲ್ಪಜ್ಞತ್ವವನ್ನು ಬಿಟ್ಟು ಕೇವಲ ಚೇತನ-ಚೇತನಗಳಿಗೆ ಮಾತ್ರ ಐಕ್ಯವನ್ನು ಹೇಳುವುದು.

ಹೀಗೆ ಲಕ್ಷಣಾವೃತ್ತಿಯಿಂದ ಬ್ರಹ್ಮನನ್ನು ಉಪನಿಷತ್ತಿನ ಮಾತುಗಳು ಬಣ್ಣಿಸುತ್ತವೆ ಎಂದು ಹೇಳುತ್ತೇವೆ ಎಂದು ಮಾಯಾವಾದಿಗಳು ಹೇಳಿದರೆ ಯಾವ ಮಾತಿನಿಂದಲೂ ಬಣ್ಣಿಸಲಾಗದವನು ಲಕ್ಷಣಾ ವೃತ್ತಿಯಿಂದಲಾದರೂ ಮಾತಿಗೆ ಸಿಲುಕಿದನೆಂದು ಹೇಳಿದಂತಾಯಿತಲ್ಲವೆ? **(ಸಶೇಷ)**

**ದೀನ-ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ.**

ಭಾಗ–6

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಹರಿಕಥಾಮೃತಸಾರದಲ್ಲಿರುವ ಪ್ರತಿಪದ್ಯವು, ಪ್ರತಿವಾಕ್ಯವು, ಪ್ರತಿಶಬ್ದವೂ ಯಾವುದೋ ಒಂದು ರೀತಿಯಲ್ಲಿ ಹರಿಯ ನಾಮ–ರೂಪ–ಗುಣಗಳ ಸಾಗರದೊಟ್ಟಿಗೆ ಸಂಗಮವನ್ನೇ ಹೊಂದುತ್ತಿರುವುವು. ಎಲ್ಲ ಗ್ರಂಥಗಳಿಂದ, ಎಲ್ಲ ಸಾತ್ವಿಕ ವ್ಯಕ್ತಿಗಳಿಂದ ಪ್ರತಿಪಾದಿತಗಳಾದ ಹರಿಯ ನಾಮ–ರೂಪಗಳಿಗೆ ಮೋಕ್ಷಪ್ರದಾತೃತ್ವ ಶಕ್ತಿಯು ಇದ್ದೇ ಇದೆ. ವಿಷ್ಣುವಿನ ನಾಮ ಮಹಿಮೆಯನ್ನು ಯಾರಿಂದ ತಾನೇ ವರ್ಣಿಸಲು ಸಾಧ್ಯ. ಅಜಾಮಿಳನಂತಹ ಪಾಪಿ ಮೃತ್ಯುಪಾಶದಿಂದ ಮುಕ್ತನಾಗಿ ವೈಕುಂಠವನ್ನು ಸೇರಿದ.

**"ಮಾಹಾತ್ಮ್ಯಂ ವಿಷ್ಣುನಾಮ್ನೋಹಿ ವರ್ಣಿತುಂ ಕೇನ ಶಕ್ಯತೇ।**
**ಅಜಾಮಿಳೋ ಮೃತ್ಯುಪಾಶಾತ್ ಮುಕ್ತೋ ವೈಕುಂಠಲೋಕಗಃ ॥"**

ಇದು ಆದಿತ್ಯಪುರಾಣದ ಮಾತು. ಇಲ್ಲಿಗೆ ಮುಗಿಯುಲಿಲ್ಲ ಆ ಪುರಾಣದ ಉಪದೇಶ.–

**ನೈಕೋ ಅಜಾಮಿಳ ಏವ ಪಾಪಜಲಧಿಂ ಸಂತೀರ್ಣವಾನ್ ನಾಮತಃ**
**ಪ್ರಹ್ಲಾದೋಪಿ ಗಜೇಂದ್ರಪೂರ್ವಬಹವೋ ದುಃಖಾಂಬುಧೇಸ್ತಾರಿತಾಃ॥**
**ಯನ್ನಾಮಸ್ಮರಣಾಽಮೃತಾಂಬುಧಿ ನಿಮಗ್ನೋಽದ್ಯಾಪಿ ಗೌರೀಪತಿಃ।**
**ಯಧ್ಯಾನೇ ನಿರತಾಃ ಪ್ರಜಾಪತಿಮುಖಾಃ ಪ್ರಾಪ್ತಾ ಮಹಾವೈಭವಂ।**

ಅಜಾಮಿಳ ಮಾತ್ರ ಪಾಪಜಲಧಿಯನ್ನು ದಾಟಿದವನಲ್ಲ ಪ್ರಹ್ಲಾದ ಗಜೇಂದ್ರ ಮೊದಲಾದವರೆಲ್ಲರೂ ದುಃಖಾಂಬುಧಿಯನ್ನು ದಾಟಿದವರೇ. ಗೌರಿಪತಿಯಾದ ಶಿವನು, ಪ್ರಜಾಪತಿ ಮೊದಲಾದ ಪ್ರಮುಖರೆಲ್ಲರೂ ಹರಿನಾಮಸಂಕೀರ್ತನೆಯಿಂದಲೇ ಮಹಾವೈಭವನ್ನು ಪಡೆದಿರುವರು. ಈ ವಿವೇಚನಾದೃಷ್ಟಿಯಿಂದ ನೋಡಿದಾಗ ಬಿಂಬಾಪರೋಕ್ಷವೆಂಬ ಮಹಾಭಾಗ್ಯಕ್ಕೆ ಭಾಗಿಗಳಾಗಿ ಎಲ್ಲೆಡೆಯಲ್ಲಿಯೂ ಭಗವಂತನ ವಿಶ್ವರೂಪವನ್ನು ಕಾಣುತ್ತಾ, ಸಕಲ ಸಜ್ಜನರ ಶ್ರೇಯಸ್ಸಿಗಾಗಿ ಶ್ರಮಿಸಿದ ಶ್ರೀಜಗನ್ನಾಥದಾಸರ ಮುಖಕಮಲದಿಂದ ಹೊರಟ ಹರಿನಾಮ–ರೂಪ–ಗುಣಗಳ ಶಕ್ತಿಸಾಮರ್ಥ್ಯಗಳನ್ನು ಯಾರಿಗೆ ತಾನೇ ವರ್ಣಿಸಲು ಸಾಧ್ಯ.

ಸಾಧನೆಗೆ ಯೋಗ್ಯವಾದ ಮಾನವ ಜನ್ಮಬರುವುದೇ ದುರ್ಲಭ. ಅದರಲ್ಲೂ ವೈಷ್ಣವಜನ್ಮ. ಇದರ ಮೇಲೆ ಶ್ರೀಮಧ್ವರ ಸತ್ಸಿದ್ಧಾಂತದ ಜ್ಞಾನ. ಎಲ್ಲವೂ ಅಸದೃಶ. ದುರ್ಲಭಗಳಾದ ಈ

**ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,**

ಎಲ್ಲವನ್ನೂ ಪಡೆದು ತಮ್ಮ ಭಗವಂತನನ್ನು ಕುಣಿಸಿದ ವಿಜಯರಾಯರಂತಹ ಗುರುಗಳನ್ನು ಪಡೆದು, ಮಹಾತ್ಯಾಗಿಗಳೆನಿಸಿದ ಗೋಪಾಲದಾಸರಿಂದ ನಲವತ್ತು ವರ್ಷಗಳ ಆಯುಷ್ಯವನ್ನು ಪಡೆದ ಜಗನ್ನಾಥದಾಸರ ಯೋಗ್ಯತೆ ಎಷ್ಟಿರಬಹುದೋ? ನರಸಿಂಹರೂಪವನ್ನು ಕಣ್ಣಾರೆಕಂಡ ಪ್ರಹ್ಲಾದನ ಅನುಜರಲ್ಲವೇ ಇವರು? ಇವರನ್ನು ನರರೆಂದವ ನಿರಯಭಾಗಿಯೇ ಸರಿ.

"ಎಂತು ಬಣ್ಣಿಸಲಳವೆ ಭಗ-
ವಂತನಮಲ ಗುಣಾನುವಾದಗ
ಳಂತುಪರಿಯಲಿ ಪೂರ್ಣಬೋಧರ ಮತವ ಪೊಂದಿದರ
ಚಿಂತನೆಗೆ ಬಪ್ಪಂತೆ ಬಹು ದೃ-
ಷ್ಟಾಂತಪೂರ್ವಕವಾಗಿ ಪೇಳ್ದ ಮ-
ಹಾಂತರಿಗೆ ನರರೆಂದು ಬಗೆವರೆ ನಿರಯಭಾಗಿವರು

ಇದು ಜಗನ್ನಾಥದಾಸರ ಅಚ್ಚುಮೆಚ್ಚಿನ ಶಿಷ್ಯರೆನಿಸಿದ ಕರ್ಜಗಿದಾಸರ ಮನದ ನಿಲುವು.★


**ಶ್ರೀ ಶ್ರೀ ಪರಮಪೂಜ್ಯ ಶ್ರೀ ಪಲಿಮಾರು ಮಠಾಧೀಶರಾದ**

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರೊಂದಿಗೆ**

**ಹೈಟೆಕ್ ಏರ್ ಬಸ್‌ನಲ್ಲಿ**

**ಹತ್ತು ದಿನಗಳ ದಕ್ಷಿಣ ಭಾರತ ಯಾತ್ರಾ ಪ್ರವಾಸ**

**ಸಂದರ್ಶಿಸುವ ಸ್ಥಳಗಳು:**

ಘಟಿಕಾಚಲ, ಕಂಚಿ, ತಿರುವಣ್ಣಾಮಲೈ, ತಿರುಕೊಯಿಲೂರು, ವೃದ್ಧಾಚಲಂ, ಶ್ರೀಮುಷ್ಣಂ, ಚಿದಂಬರಂ ಕುಂಭಕೋಣಂ, ತಂಜಾವೂರು, ಶ್ರೀರಂಗಂ, ಅಳಗರಕೊಯಿಲ್, ಮಧುರೈ, ನವಪಾಷಾಣಂ, ದರ್ಭಶಯನಂ, ರಾಮೇಶ್ವರಂ, ತಿರುನಲ್ವೇಲಿ, ತೋತಾದ್ರಿ, ನಾಗರಕೊಯಿಲ್, ಶುಚೀಂದ್ರ, ಕನ್ಯಾಕುಮಾರಿ, ತಿರುವನಂತಪುರಂ ಗುರುವಾಯೂರು, ಇನ್ನೂ ಹಲವು ಕ್ಷೇತ್ರಗಳು

**2009 ಫೆಬ್ರವರಿ 12ರಿಂದ ಫೆಬ್ರವರಿ 21 ವರೆಗೆ**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಬಿ. ಮಧುಸೂದನ ಆಚಾರ್ಯ, ಶ್ರೀಪಲಿಮಾರು ಮಠ, ಉಡುಪಿ.,Ph.2525598, 2534960(O) 2542425 (R) Mobile: 9448607425, 9008415704 ,ಶ್ರೀ ಎ.ರ್ ತಂತ್ರಿ, ಬೆಂಗಳೂರು, Mobile: 9448073119**

**ರಂಗನಾಥ ದಿಗ್ಗವಿ – Mobile: 9448506017**

**ವಿ.ಸೂ ಪ್ರತಿದಿನ ಆಯಾಕ್ಷೇತ್ರದ ಬಗ್ಗೆ ಸ್ವಾಮೀಜಿಯವರಿಂದ ಪ್ರವಚನ ಇದೆ.**


**ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.**

ಪುರಾಣ ಪರಿಚಯ

ಭಾಗ-26

# ಶ್ರೀವಿಷ್ಣುಪುರಾಣ

## ಬ್ರಹ್ಮಪಾರ ಸ್ತೋತ್ರ

-ಸ್ಫೂರ್ತಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಸ ಬ್ರಹ್ಮಪಾರಃ** - ಆತನನ್ನು (ವಿಷ್ಣುವನ್ನು) ಸಂಸಾರಸಾಗರದ ಆಚೆ ತೀರವೆಂದು ಬಣ್ಣಿಸುವುದೇ ವೇದಗಳ ಅಂತಿಮ ಧ್ಯೇಯ. '**ಸಾ ಕಾಷ್ಠಾ ಸಾ ಪರಾಗತಿಃ** ; ಎಂಬ ವೇದದ ಮಾತುಗಳೇ ಇದಕ್ಕೆ ಸಾಕ್ಷಿ.

**ಪರ ಪಾರಭೂತಃ** - ಈತನು ಉತ್ತಮತ್ತ್ವದ ತುತ್ತ ತುದಿಯನ್ನು ತಲುಪಿದವ. ಅಂದರೆ ಸರ್ವೋತ್ತಮನಾದವ.

**ಪರಃಪರೇಭ್ಯಃ** - ಶ್ರೇಷ್ಠರಾದ ಬ್ರಹ್ಮಾದಿಗಳಿಗಿಂತಲೂ ಶ್ರೇಷ್ಠನಾದವನು.

ಜಡವಾದ ವಸ್ತುವಿಗಿಂತ ಚೇತನ ಶ್ರೇಷ್ಠ. ಚೇತನದಲ್ಲಿಯೂ ಚಲಿಸುವ ಶಕ್ತಿ ಇಲ್ಲದ ಸ್ಥಾವರಕ್ಕಿಂತ ಚಲಿಸುವ ಶಕ್ತಿಯುಳ್ಳ ಜಂಗಮ ಶ್ರೇಷ್ಠ. ಜಂಗಮದಲ್ಲಿಯೂ ಪ್ರಾಣಿ-ಪಕ್ಷಿ ಮುಂತಾದುವುಗಳಿಂದ ಮನುಷ್ಯ ಶ್ರೇಷ್ಠ. ಮನುಷ್ಯರಲ್ಲಿಯೂ ಏನನ್ನೂ ಸಾಧಿಸದೆ ಕೇವಲ ಸ್ವಾರ್ಥಿಗಳಾಗಿ ಬದುಕಿ ಸಾಯುವವರಿಗಿಂತ ಸಾಧನೆಯ ಮೂಲಕ ಎತ್ತರಕ್ಕೇರಿದ ಮನುಷ್ಯೋತ್ತಮರು ಶ್ರೇಷ್ಠ. ಇವರಿಗಿಂತ ಪಿತೃಗಳು-ಗಂಧರ್ವರು ಮುಂತಾದವರು ಶ್ರೇಷ್ಠ. ಇವರಿಗಿಂತ ಇಂದ್ರಾದಿದೇವತೆಗಳು ಶ್ರೇಷ್ಠ. ಇವರಿಗಿಂತ ಸಪತ್ನೀಕರಾದ ಗರುಡ, ಶೇಷ ರುದ್ರರು ಶ್ರೇಷ್ಠರು. ಇವರಿಗಿಂತ ಸಪತ್ನೀಕರಾದ ಬ್ರಹ್ಮ, ವಾಯುಗಳು ಶ್ರೇಷ್ಠರು. ಇವರೀರ್ವರಿಗಿಂತ ಮಹಾಲಕ್ಷ್ಮಿಯು ಶ್ರೇಷ್ಠಳು. ಹೀಗೆ ಶ್ರೇಷ್ಠರಾದವರ ಪಟ್ಟಿ ಉದ್ದವಾಗಿದೆ. ಆದರೆ ಈ ಎಲ್ಲ ಶ್ರೇಷ್ಠರಾದವರಿಗೂ ಶ್ರೇಷ್ಠನಾಗಿರುವವನೇ ಶ್ರೀಮನ್ನಾರಾಯಣ.

**ಪರಮಾರ್ಥರೂಪೀ**- ಜೀವನು ಬಯಸುವ ಬಯಕೆಗಳಲ್ಲಿ ಅತ್ಯುತ್ಕೃಷ್ಟವಾದ ಮೋಕ್ಷವನ್ನು ಕರುಣಿಸುವವ. ಅಂತಿಂಥವರಿಗಲ್ಲ. ಬ್ರಹ್ಮಾದಿದೇವತೆಗಳಿಗೂ ಬಯಸಿದ ಬಯಕೆಗಳನ್ನು ಪೂರೈಸುವವ ಈತನೇ.

**ಸಕಾರಣಂ ಕಾರಣತಃ ತತೋಽಪಿ**- ಈ ಬ್ರಹ್ಮಾಂಡದ ಸೃಷ್ಟಿಗೆ ಕಾರಣಗಳಾದ ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ ಈ ಪಂಚಭೂತಗಳು. ಶಬ್ದ, ಸ್ಪರ್ಶ, ರೂಪ, ರಸ, ಗಂಧ

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.**

ಈ ತನ್ಮಾತ್ರೆಗಳಿಗೂ ಕಾರಣನಾದವನು ಈತನೇ. ಪಂಚಭೂತಗಳಿಂದ ನಿರ್ಮಿತವಾದದ್ದು ಪ್ರಪಂಚವೆಂದು ಪ್ರಸಿದ್ಧ. ಆದರೆ ಆ ಜಡವಾದ ಪಂಚಭೂತಗಳು ತಾನಾಗಿಯೇ ಈ ಜಗತ್ತನ್ನು ನಿರ್ಮಿಸಿದ್ದಲ್ಲ. ಅದರೊಳಗೆ ಶ್ರೀಹರಿಯೇ ಮುಖ್ಯ ಕಾರಣನಾಗಿ ಪಂಚರೂಪದಿಂದ ಕುಳಿತು ಈ ಜಗತ್ತನ್ನು ನಿರ್ಮಿಸಿದನು. ಆದ್ದರಿಂದ ಜಗತ್ತಿನ ನಿರ್ಮಾಣಕ್ಕೆ ಕಾರಣವಾಗಿರುವ ವಸ್ತುಗಳ ಒಳಗೂ ವ್ಯಾಪಿಸಿಕೊಂಡು ಕುಳಿತಿರುವವ ಈತನೇ.

**ತಸ್ಯಾಪಿಹೇತುಃ–** ಪಂಚಭೂತ, ತನ್ಮಾತ್ರೆಗಳು ಅಹಂಕಾರತತ್ವದಿಂದ ಉಂಟಾಗಿವೆಯೆಂದು ಶಾಸ್ತ್ರ ಪ್ರಸಿದ್ಧಿ. ಆದರೆ ಆ ಅಹಂಕಾರತತ್ವವೂ ತಾನಾಗಿಯೇ ಪಂಚಭೂತ, ತನ್ಮಾತ್ರೆಗಳ ಸೃಷ್ಟಿಗೆ ಕಾರಣವಾಗಿಲ್ಲ. ಅಹಂಕಾರತತ್ವದ ಒಳಗೂ ಕುಳಿತು ಸೃಷ್ಟಿಸುತ್ತಿರುವವನು ಶ್ರೀಹರಿಯೇ. ಅಂದರೆ ಅಹಂಕಾರತತ್ವಕ್ಕೆ ಅಭಿಮಾನಿಯಾದ ಶಿವನ ಒಳಗೂ ಶಿವನಾಗಿ ಕುಳಿತಿರುವವ ಶ್ರೀಹರಿಯೇ ಸರಿ.

**ಪರಹೇತು ಹೇತುಃ –** ಅಹಂಕಾರತತ್ವದ ಸೃಷ್ಟಿಗೆ ಕಾರಣವಾದದ್ದು ಮಹತ್‌ತತ್ವವೆಂದು ಶಾಸ್ತ್ರಪ್ರಸಿದ್ಧಿ. ಆದರೆ ಆ ಮಹತ್ ತತ್ವದೊಳಗೆ ಕುಳಿತು ನಿಜವಾಗಿ ಸೃಷ್ಟಿಸುವವನು ಈತನೇ. ಅಂದರೆ  ಮಹತ್‌ತತ್ವಾಭಿಮಾನಿಯಾದ ಚತುರ್ಮುಖ ಬ್ರಹ್ಮನೊಳಗೆ ಬ್ರಹ್ಮರೂಪದಿಂದ ಕುಳಿತಿರುವವನು ಶ್ರೀಹರಿಯೇ ಸರಿ.

ಮಹತ್‌ತತ್ವ ಪ್ರಕೃತಿತತ್ವದಿಂದ ರೂಪಗೊಂಡದ್ದೆಂದು ಶಾಸ್ತ್ರಪ್ರಸಿದ್ಧಿ ಇದ್ದರೂ ಪ್ರಕೃತಿ ತತ್ವದೊಳಗೆ ಕುಳಿತು ಮಹತ್‌ತತ್ವವನ್ನು ಸೃಜಿಸುವವನು ಈತನೇ. ಅಂದರೆ ಪ್ರಕೃತಿ ತತ್ವಾಭಿಮಾನಿನಿಯಾದ ಮಹಾಲಕ್ಷ್ಮಿಯ ಒಳಗೆ ಕುಳಿತು ಚತುರ್ಮುಖನನ್ನು ಸೃಷ್ಟಿಸುವವನು ಈ ಹರಿಯೇ ಎಂದಾಯಿತು.

**ಕಾರ್ಯೇಷು ಚೈವಂ ಸ ಹಿ ಕರ್ಮಕತೃರೂಪೈರಶೇಷೈಃ ಅವತೀಹ ಸರ್ವಮ್–**

ಅವನೇ ಎಲ್ಲ ಕಾರ್ಯಗಳಲ್ಲಿ ಕರ್ಮಮಾಡುವ ಕರ್ತೃವಿನೊಳಗೆ, ಕರ್ಮದೊಳಗೆ, ಕರ್ಮಕ್ಕೆ ಬೇಕಾದ ಸಾಧನಗಳೊಳಗೆ ಲೆಕ್ಕವಿಲ್ಲದಷ್ಟು ರೂಪಗಳಿಂದ ಕುಳಿತು ಕರ್ತೃವಿನೊಳಗೆ ಕರ್ಮಮಾಡುವ ಶಕ್ತಿಯನ್ನು ಎಚ್ಚರಿಸುತ್ತ, ಕರ್ಮದೊಳಗೆ ಅದರ ಮಹತ್ವವನ್ನು ಹೆಚ್ಚಿಸುತ್ತ, ಕರ್ಮಕ್ಕೆ ಬೇಕಾದ ಸಾಧನೆಗಳೊಳಗೆ ಸಹಕಾರಿಯಾಗಿ ಕುಳಿತು ಪ್ರತಿಯೊಂದು ಕರ್ಮವನ್ನೂ, ವ್ಯಕ್ತಿಯನ್ನೂ, ಹೀಗೆ ಇಲ್ಲಿ ಪ್ರತಿಯೊಂದನ್ನೂ ರಕ್ಷಿಸುತ್ತಿದ್ದಾನೆ.

(ಸಶೇಷ)

**ಭಾರತೀಯ ಸಂಸ್ಕೃತಿ–ವಿದ್ಯೆಗಳನ್ನು ಕಲಿಯಲು ತೊಡಗಿರಿ.**

ಅವಲೋಕನ

# ಅಹಲ್ಯೆಯ ಪಾತಿವ್ರತ್ಯ ಅಡಗಿರುವುದು ಇಲ್ಲಿ..........

–ಸಗ್ರಿ ರಾಘವೇಂದ್ರ ಉಪಾಧ್ಯಾಯ

'ಅಹಲ್ಯೆ ದೇವೇಂದ್ರನ ಜೊತೆಗೆ ರಮಿಸಿದರೂ ಮತ್ತೆ ಆ ಬಗ್ಗೆ ಪಶ್ಚಾತ್ತಾಪಪಟ್ಟು ಶಿಲಾರೂಪ ತಾಳಿ ಪ್ರಾಯಶ್ಚಿತ್ತವನ್ನಾಚರಿಸಿರುವಳು. ಆದುದರಿಂದ ಆಕೆಯನ್ನು ಪತಿವ್ರತಾಶಿರೋಮಣಿಗಳಲ್ಲಿ ಒಬ್ಬಳನ್ನಾಗಿ ಪರಿಗಣಿಸಬಹುದಾಗಿದೆ' ಎಂದು ಅಹಲ್ಯೆಯ ಪಾತಿವ್ರತ್ಯವನ್ನು ಸಮರ್ಥಿಸಹೊರಡುವವರು ಸಾಮಾನ್ಯವಾಗಿ ಪ್ರಸ್ತುತಪಡಿಸುವ ಉಪಪಾದನೆ.

ಅಹಲ್ಯೆ ಒಂದು ವೇಳೆ ತಾನಾಗಿಯೇ ತನ್ನ ತಪ್ಪನ್ನು ವಿವೇಚಿಸಿಕೊಂಡು, ಆ ಬಗ್ಗೆ ಪಶ್ಚಾತ್ತಾಪಪಟ್ಟು ಅದಕ್ಕಾಗಿ ಪ್ರಾಯಶ್ಚಿತ್ತವನ್ನಾಚರಿಸಿದ್ದರೆ ಅವರ ಉಪಪಾದನೆ ಸಮರ್ಥನೀಯವೆನಿಸಬಹುದು. ಆದರೆ ರಾಮಾಯಣಾದಿಗಳಲ್ಲಿ ಉಲ್ಲೇಖಗೊಂಡಿರುವಂತೆ ಗೌತಮರು ಹಾಗೆ ಶಪಿಸಿದಾಗ ಅನಿವಾರ್ಯವಾಗಿ ಆಕೆ ತನ್ನ ತಪ್ಪಿಗಾಗಿ ಆ ಶಿಕ್ಷೆಯನ್ನು ಅನುಭವಿಸಬೇಕಾಯಿತೇ ಹೊರತು ಪಶ್ಚಾತ್ತಾಪಪೂರ್ವಕವಾಗಿ ಪ್ರಾಯಶ್ಚಿತ್ತರೂಪದಿಂದ ಅನುಭವಿಸಿದ್ದಲ್ಲ. ಹೀಗಿರುವಾಗ ಆಕೆಯ ಪಾತಿವ್ರತ್ಯ ಹೇಗೆ ತಾನೇ ಸಮರ್ಥನೀಯ ಎನಿಸಬಲ್ಲದು?

## ಮಧ್ವಗುರುಗಳಿಂದ ನ್ಯಾಯ

ವಾಲ್ಮೀಕಿರಾಮಾಯಣದ (ಬಾಲಕಾಂಡ 48–20) ಪ್ರಕಾರ **'ಮತಿಂಚಕಾರ ದುರ್ಮೇಧಾ ದೇವರಾಜಕುತೂಹಲಾತ್'**– ದೇವರಾಜನ ಜೊತೆಗೆ ರಮಿಸುವ ಕೆಟ್ಟ ಕುತೂಹಲಕ್ಕೆ ಒಳಗಾಗಿ ಅಹಲ್ಯೆ ಅವನ ಬೇಡಿಕೆಯನ್ನು ಪೂರೈಸಲು ಒಪ್ಪಿಕೊಂಡೇ ಸ್ವೇಚ್ಛಾನುಸಾರವಾಗಿಯೇ ಅವನ ಜೊತೆಗೆ ರಮಿಸಿದವಳು. ಹೀಗೆ ಕೆಟ್ಟ ಕುತೂಹಲಕ್ಕೆ ಒಳಗಾಗಿ, ವಿವೇಕವನ್ನು ಕಳಕೊಂಡು ವ್ಯಭಿಚಾರವನ್ನೆಸಗಿದ ಅಹಲ್ಯೆ ಸಾಮಾನ್ಯವಾಗಿ ಪತಿವ್ರತೆ ಎಂದೇ ಪರಿಗಣಿಸಲು ಅನರ್ಹಳೆನಿಸಳೆಂದ ಮೇಲೆ ಪತಿವ್ರತಾಶಿರೋಮಣಿಗಳಲ್ಲಿ ಒಬ್ಬಳೆನಿಸುವುದಾದರೂ ಹೇಗೆ?

ಶ್ರೀಮಧ್ವಗುರುಗಳಿಂದ ಅಹಲ್ಯೆ ಪಾತ್ರಕ್ಕೆ ನ್ಯಾಯ ಸಂದಿದೆ. ಅವರು ಸಿದ್ಧಾಂತಿಸಿರುವಂತೆ **'.................ಪ್ರಧರ್ಷಣಾದಿಂದ್ರಕೃತಾಚ್ಛಲೀಕೃತಾಮ್.........'** (ಮ.ಭಾರ.ತಾ.ನಿ.4–10) ಅಹಲ್ಯೆ

ಹಸಿದವರಿಗೆ ಅನ್ನವನ್ನು ನೀಡಿ.

ಸ್ವೇಚ್ಛೆಯಿಂದ ದೇವೇಂದ್ರನ ಜೊತೆಗೆ ರಮಿಸಿದವಳಲ್ಲ. ಬದಲಾಗಿ ದೇವೇಂದ್ರನ ಬಯಕೆಗೆ ಪ್ರತಿರೋಧವನ್ನೊಡ್ಡಿ, ಅವನ ಬಲಾತ್ಕಾರಕ್ಕೊಳಗಾಗಿ ಅನಿವಾರ್ಯವಾಗಿ ಅವನ ಸಂಪರ್ಕಕ್ಕೊಳಗಾದವಳು. ಮನಃಪೂರ್ವಕವಾಗಿ ಅವನ ಸಂಪರ್ಕವನ್ನು ನಡೆಸದ ಪ್ರಯುಕ್ತ ಆಕೆಯ ಪಾತಿವ್ರತ್ಯಕ್ಕೆ ಚ್ಯುತಿ ಇಲ್ಲ ಅಷ್ಟೇ ಅಲ್ಲ, ದೇವೇಂದ್ರನಂತಹ ಸುಂದರ, ಪ್ರಬಲ, ದೇವತೆ ಕೇಳಿಕೊಂಡರೂ ಮೋಹಕ್ಕೆ ಒಳಗಾಗದೆ ಅವನು ಬಲಾತ್ಕರಿಸಬೇಕಾದಷ್ಟೂ ಅವನಿಗೆ ವಿರೋಧವನ್ನು ವ್ಯಕ್ತಪಡಿಸಬೇಕೆಂದರೆ ಆಕೆಯ ಪಾತಿವ್ರತ್ಯ ಎಷ್ಟು ಎತ್ತರ ಮಟ್ಟದ್ದು! ಎಷ್ಟು ದೃಢವಾದದ್ದು–ಎಂದೂ ಸ್ಪಷ್ಟವಾಗುವುದು. 'ವಿಕಾರಹೇತೌ ಸತಿ ವಿಕ್ರಿಯಂತೇ ಯೇಷಾಂ ನ ಚೇತಾಂಸಿ ತ ಏವ ಧೀರಾಃ'–ಎಂದು ಕಾಲಿದಾಸ ತಿಳಿಸಿರುವಂತೆ ಮಾಮೂಲಿ ಸ್ಥಿತಿಯಲ್ಲಿ ಸಾಮಾನ್ಯವಾಗಿ ಎಲ್ಲರೂ ಧಾರ್ಮಿಕವಾಗಿಯೇ ನಡೆದುಕೊಳ್ಳುವರು. ಆದರೆ ಮಾನಸಿಕ ವಿಕಾರಕ್ಕೆ ಬೇಕಾದ ದುಃಸ್ಥಿತಿ ಇದ್ದಾಗಲೂ ಅದಕ್ಕೆ ಮರುಳಾಗದೆ ದೃಢರಾಗಿ ಇರುವರೆಂದರೆ ಅಂತಹವರು ಧೀರರೆನಿಸಬಲ್ಲರು. ಆ ಅರ್ಥದಲ್ಲಿ ಧೀರೆ ಎನಿಸಬಹುದಾದ ಅಹಲ್ಯೆಪತಿವ್ರತಾಶಿರೋಮಣಿ ಎಂದು ಪರಿಗಣಿತಳಾಗಬಹುದಾಗಿದೆ.

ಹಾಗೆಯೇ ಆ ವ್ಯಭಿಚಾರಕ್ಕೆ ತಾನು ಕಿಂಚಿತ್ತೂ ಕಾರಣಳಲ್ಲದಿದ್ದರೂ ಗೌತಮರು ತನ್ನ ಬಗ್ಗೆ ತಪ್ಪು ತಿಳುವಳಿಕೆಗೆ ಒಳಗಾಗಿ ಶಿಲಾರೂಪವನ್ನು ತಾಳುವಂತೆ ಶಪಿಸಿದರೂ ಆ ಶಾಪವನ್ನು ಮೌನವಾಗಿ ಸ್ವೀಕರಿಸುವಳೇ ಹೊರತು ತಾನು ಆ ಶಾಪಕ್ಕೆ ಅರ್ಹಳೇ ಅಲ್ಲ ಎಂದು ಸ್ವಲ್ಪವೂ ಅಸಮಾಧಾನ ತಾಳುವುದಿಲ್ಲ. ಇದೂ ಒಂದು ಪತಿವ್ರತೆಯರ ವಿಶೇಷ ಲಕ್ಷಣ. **'ಭರ್ತುರ್ವಿಪ್ರಕೃತಾಪಿರೋಷಣತಯಾ ಮಾ ಸ್ಮ ಪ್ರತೀಪಂ ಗಮಃ'** ಗಂಡನು ಏನೋ ತಪ್ಪು ತಿಳುವಳಿಕೆಯಿಂದ ಅಪಕಾರವನ್ನೇ ನಡೆಸಿದರೂ ಆ ಬಗ್ಗೆ ಸಿಟ್ಟು ತಾಳಿ ಸೇಡುತೀರಿಸಲು ತೊಡಗದಿರುವಂತದ್ದು ಪತಿವ್ರತೆಯರ ಪ್ರಮುಖ ಲಕ್ಷಣವೆಂದು ಕಾಲಿದಾಸ ಕಣ್ವರ ಮೂಲಕ ತಿಳಿಸಿರುವನು. ಪತಿವ್ರತೆಯರ ಈ ಲಕ್ಷಣವೂ ಅಹಲ್ಯೆಯಲ್ಲಿ ಇತ್ತೆಂದು ಸಿದ್ಧವಾಗುವುದು.

ಹೀಗೆ ಅಹಲ್ಯೆ ಪತಿವ್ರತಾಶಿರೋಮಣಿಯಾಗಿ ಮೆರೆದುದಕ್ಕೆ ಕಾರಣ ದೇವೇಂದ್ರನ ಪ್ರಲೋಭನೆಗೆ ಒಳಗಾಗದಿರುವಂತಹದ್ದು ಹಾಗೂ ತನ್ನದ್ದೇನೂ ತಪ್ಪು ಇಲ್ಲದಿದ್ದರೂ ಗೌತಮರು ತನಗೆ ಕೊಟ್ಟ ಶಾಪವನ್ನು ಏನೂ ಅಸಮಾಧಾನವಿಲ್ಲದೆ ಸ್ವೀಕರಿಸಿರುವಂತಹದ್ದು.

**ಮಹಾಭಾರತದ ಆಧಾರ**

ಹೀಗೆ ಮಧ್ವಗುರುಗಳು ಅಹಲ್ಯೆಯ ಚಾರಿತ್ರ್ಯದ ಶುದ್ಧಿಯನ್ನು ಸಮರ್ಥಿಸಿರುವುದು

ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ.

ಮಹಾಭಾರತದ ಆಧಾರದ ಮೇಲೆ.

ಮಹಾಭಾರತದಲ್ಲಿ (ಶಾಂತಿಪರ್ವ 342–23) ಅಹಲ್ಯೆಯನ್ನು ಬಲಾತ್ಕರಿಸಿದ ಪ್ರಯುಕ್ತ ಗೌತಮರಿಂದ ಕುದುರೆಯ ಮೀಸೆಯನ್ನು ಹೊಂದಿರುವವನು ದೇವೇಂದ್ರನು– **'ಅಹಲ್ಯಾಧರ್ಷಣನಿಮಿತ್ತಂ ಹಿ ಗೌತಮಾದ್ಧರಿಶ್ಮಶ್ರುತಾಮಿಂದ್ರಃ ಪ್ರಾಪ್ತಃ.........'** ಎಂದು ನಿರೂಪಿಸಲಾಗಿದೆ. ಇದನ್ನು ಆಧಾರವಾಗಿಟ್ಟುಕೊಂಡು ಶ್ರೀಮಧ್ವರು ದೇವೇಂದ್ರನ ಬಲಾತ್ಕಾರಕ್ಕೊಳಗಾಗಿ ಅಹಲ್ಯೆ ಅವನನ್ನು ಸಂಪರ್ಕಿಸಿದ್ದೇ ಹೊರತು 'ದೇವರಾಜಕುತೂಹಲ'ದಿಂದ ಅಲ್ಲ–ಎಂದು ಸ್ಪಷ್ಟಪಡಿಸಿರುವರು.

ದರ್ಶನ ಭಾಷೆಯ ನಿರೂಪಣೆ

ಹಾಗಾದರೆ ವಾಲ್ಮೀಕಿರಾಮಾಯಣದಲ್ಲಿ ದೇವರಾಜಕುತೂಹಲದಿಂದ ಅಹಲ್ಯೆ ಅವನನ್ನು ಸಂಪರ್ಕಿಸಿದಳೆಂದು ಯಾಕೆ ನಿರೂಪಿಸಲಾಗಿದೆ? ವಾಲ್ಮೀಕಿರಾಮಾಯಣದ ಈ ನಿರೂಪಣೆ ದರ್ಶನ ಭಾಷೆಯ ಶೈಲಿಗೆ ಸಂಬಂಧಿಸಿದ್ದು. **'ಲೋಕದರ್ಶನಮಾಶ್ರಿತ್ಯ ದೇವಾಶ್ಚ ಮುನಯಸ್ತಥಾ ಬ್ರೂಯುಃ ಕಥಾಃ.....'** (ಮ.ಭಾರ.ತಾ.ನಿ. 22–395) ಎಂದು ತಿಳಿಸಿರುವಂತೆ ಇಂದ್ರ ಅಹಲ್ಯೆಯರ ಸಂಪರ್ಕದ ಬಗ್ಗೆ ಸಾಮಾನ್ಯಜನರು ದೇವೇಂದ್ರನಂತಹ ಸುಂದರ, ಸಮರ್ಥ ಬಂದಾಗ ಸ್ತ್ರೀಸಾಮಾನ್ಯರು ಕುತೂಹಲದಿಂದ ಒಪ್ಪಿಕೊಳ್ಳಬಹುದಾದಂತೆ ಅಹಲ್ಯೆಯೂ ಒಪ್ಪಿಕೊಂಡಿದ್ದಿರಬಹುದೆಂದು ಭಾವಿಸುವುದರಿಂದ ಅಂತಹ ಲೋಕಸಾಮಾನ್ಯರ ದರ್ಶನಕ್ಕನುಗುಣವಾಗಿಯಷ್ಟೇ ವಾಲ್ಮೀಕಿ ಋಷಿಗಳು ಹಾಗೆ ನಿರೂಪಿಸಿರುವರು. ಹೊರತು ಅದು ಅಹಲ್ಯೆಯ ಬಗ್ಗೆ ಹೊರಟ ವಾಸ್ತವ ಸಂಗತಿ ಅಲ್ಲ. ಯಾಕೆಂದರೆ ವಾಲ್ಮೀಕಿಋಷಿಗಳೇ ಉತ್ತರಕಾಂಡ ರಾಮಾಯಣದಲ್ಲಿ (30–30) ಚತುರ್ಮುಖನ ಮಾತಿನಲ್ಲಿ **' ಸಾತ್ವಯಾ ಧರ್ಷಿತಾ ಶಕ್ರ ಕಾಮಾರ್ತೇನ ಸಮನ್ಯುನಾ'**– ಅಹಲ್ಯೆ ನಿನ್ನಿಂದ ಬಲಾತ್ಕಾರಕ್ಕೊಳಪಟ್ಟಿರುವಳು– ಎಂದು ತಿಳಿಸಿರುವರು. ಮುಂದೆ ಗೌತಮರ ಮಾತಿನಲ್ಲೂ 'ಯಸ್ಮಾನ್ಮೇ ಧರ್ಷಿತಾ ಪತ್ನೀ...' (30–32) ನನ್ನ ಪತ್ನಿ ಅಹಲ್ಯೆ ನಿನ್ನಿಂದ ಬಲಾತ್ಕರಿಸಲ್ಪಟ್ಟಿರುವಳೆಂದೇ ಉಲ್ಲೇಖಿಸಲಾಗಿದೆ.

ಆದ್ದರಿಂದ ಬಾಲಕಾಂಡದಲ್ಲಿ ಅಹಲ್ಯೆ ಸ್ವೇಚ್ಛೆಯಿಂದಲೇ ದೇವೇಂದ್ರನನ್ನು ಸಂಪರ್ಕಿಸಿದಳೆಂದು ನಿರೂಪಿಸಿರುವುದು ಸಾಮಾನ್ಯಜನರ ದರ್ಶನದ ಆಧಾರದಲ್ಲೇ ಹೊರತು ವಾಸ್ತವ ದೃಷ್ಟಿಯಿಂದ ಅಲ್ಲ ಎಂಬುದು ಸ್ಪಷ್ಟ.

★

**ಭಗವದ್ಗೀತೆ–ವಿಷ್ಣುಸಹಸ್ರನಾಮ–ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ**

ಮುಖಪುಟಲೇಖನ

# ನಮಃ ತುಲಸಿ ಕಲ್ಯಾಣಿ

-ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

**ಯನ್ಮೂಲೇ ಸರ್ವತೀರ್ಥಾನಿ ಯನ್ಮಧ್ಯೇ ಸರ್ವ ದೇವತಾಃ**
**ಯದಗ್ರೇ ಸರ್ವವೇದಾಶ್ಚ ತುಲಸಿತ್ವಾಂ ನಮಾಮ್ಯಹಮ್**

ತುಳಸಿ ಗಿಡದ ಕೆಳಗಿನ ಭಾಗದಲ್ಲಿ ಎಲ್ಲಾ ಪವಿತ್ರ ತೀರ್ಥಗಳೂ ಸನ್ನಿಹಿತವಾಗಿದೆ. ಮಧ್ಯಭಾಗದಲ್ಲಿ ಎಲ್ಲಾ ದೇವತೆಗಳ ಸಾನಿಧ್ಯವಿದೆ. ಮೇಲಿನ ಭಾಗದಲ್ಲಿ ನಿಖಿಲ ವೇದಗಳ ಸಾನಿಧ್ಯವೂ ಇದೆ. ಆದ್ದರಿಂದ ತುಳಸಿಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿದರೆ ಸರ್ವತೀರ್ಥಸ್ನಾನದ, ಅಖಿಲದೇವತಾನಮನದ ಸಕಲವೇದ ಪ್ರತಿಪಾದ್ಯನಾದ ನಾರಾಯಣನನ್ನು ಸೇವಿಸಿದ ಫಲವೂ ಲಭಿಸುತ್ತದೆ. ಆ ಕಾರಣದಿಂದಲೇ ನಮ್ಮ ಪೂರ್ವಜರೆಲ್ಲರೂ ಮನೆಯ ಮುಂದಾಗಲಿ, ಮಠ-ಮಂದಿರದ ಮುಂದಾಗಲಿ ತುಲಸೀ ವೃಂದಾವನವನ್ನು ಸ್ಥಾಪಿಸಿ ತುಳಸಿಯನ್ನು ಯೋಗ್ಯವಾದ ರೀತಿಯಲ್ಲಿ ಪೂಜಿಸುತ್ತಿದ್ದರು.

**ಪ್ರಸೀದ ತುಳಸೀ ದೇವಿ ಪ್ರಸೀದ ಹರಿವಲ್ಲಭೇ**
**ಕ್ಷೀರೋದ ಮಥನೋದ್ಭೂತೇ ತುಳಸಿ ತ್ವಾಂ ನಮಾಮ್ಯಹಮ್।**

ತುಳಸಿಯು ಜಗದೊಡೆಯನಾದ ನಾರಾಯಣನ ಪತ್ನಿ ಲಕ್ಷ್ಮಿಯ ಇನ್ನೊಂದು ರೂಪ. ಕ್ಷೀರಸಾಗರ ಮಥನಕಾಲದಲ್ಲಿ ಕ್ಷೀರಸಮುದ್ರದಿಂದ ಮೇಲೆ ಬಂದದ್ದಾದರಿಂದಲೇ ತುಳಸಿಗೆ ಈ ರೀತಿಯಾದ ಮಹತ್ವ. ಶ್ರೀಲಕ್ಷ್ಮಿಯದ್ದೇ ರೂಪವಾದ್ದರಿಂದ ಶ್ರೀಮನ್ನಾರಾಯಣನಿಗೆ ಸುಗಂಧಭರಿತವಾದ ಯಾವುದೇ ಹೂವಿಗಿಂತಲೂ ತುಳಸಿಯೆಂದರೆ ಅತ್ಯಂತ ಪ್ರಿಯವಾದುದ್ದು. ಕೃಷ್ಣಾವತಾರದಲ್ಲಿ ಭಗವಂತನು ತುಳಸಿ ಎಂದರೆ ತನಗೆಷ್ಟು ಪ್ರಿಯ ಎಂಬುದನ್ನು ತಿಳಿಸಿದ್ದಾನೆ. ಸತ್ಯಭಾಮೆಯು ಕೃಷ್ಣನಿಗೆ ಆಭರಣದಿಂದ ತುಲಾಭಾರ ಮಾಡುತ್ತೇನೆಂದು ಹೊರಡುತ್ತಾಳೆ. ಆ ಪ್ರಕಾರ ತಕ್ಕಡಿಯ ಒಂದು ಬದಿಯಲ್ಲಿ ಶ್ರೀಕೃಷ್ಣನನ್ನು ಕೂಡಿಸಿ ಇನ್ನೊಂದು ಬದಿಯಲ್ಲಿ ತನ್ನೆಲ್ಲಾ ಆಭರಣಗಳನ್ನೂ ಸುರಿಯುತ್ತಾಳೆ. ಆದರೆ ಕೃಷ್ಣ ಕುಳಿತ ಭಾಗ ಅಲ್ಲಾಡುವುದೇ ಇಲ್ಲ. ಆಗ ಭಾಮೆಯು ಅರಮನೆಯಲ್ಲಿರುವ ವಜ್ರ ವೈಢೂರ್ಯಾದಿ ಎಲ್ಲಾ ಆಭರಣಗಳನ್ನು ತಂದು ತಕ್ಕಡಿಯಲ್ಲಿಟ್ಟರೂ ಶ್ರೀಕೃಷ್ಣ ಕುಳಿತ ಭಾಗ ಮೇಲೆ ಬರಲೇ ಇಲ್ಲ. ಆಗ ರುಕ್ಮಿಣಿಯು ಒಂದು ದಳ ತುಳಸಿಯನ್ನು ತಂದು ಭಕ್ತಿಯಿಂದ “ಶ್ರೀಕೃಷ್ಣಾರ್ಪಣಮಸ್ತು” ಎಂದು ಆಭರಣವಿದ್ದ ಭಾಗದಲ್ಲಿ ಹಾಕಿದಾಗ ಶ್ರೀಕೃಷ್ಣಕುಳಿತ ಭಾಗ ಮೇಲೆದ್ದಿತು. ಈ ಘಟನೆಯು

ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ

ಭಕ್ತಿಯಿಂದ ಸಮರ್ಪಿಸಿದ ತುಳಸೀದಳವು ಭಗವಂತನಿಗೆ ಎಷ್ಟು ಸಂತೋಷ ಉಂಟು ಮಾಡುತ್ತದೆ ಎಂಬುದು ತಿಳಿಯುತ್ತದೆ.

ತುಳಸಿಯು ಆಧ್ಯಾತ್ಮಿಕವಾಗಿ ಎಷ್ಟು ಉಪಯುಕ್ತವೋ ಲೌಕಿಕವಾಗಿಯೂ ಅಷ್ಟೇ ಉಪಯುಕ್ತವಾಗಿದೆ. ಈ ತುಳಸಿ ಗಿಡದಿಂದ ಉತ್ಪನ್ನವಾದ ಆಮ್ಲಜನಕವು ನಾನಾವಿಧವಾದ ವ್ಯಾಧಿಗಳನ್ನು ಪರಿಹರಿಸಬಲ್ಲದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಆಯುರ್ವೇದದ ಔಷಧಿಗಳ ತಯಾರಿಕೆಯಲ್ಲಿ ತುಳಸಿಯ ಪಾತ್ರ ಮಹತ್ವವಾಗಿದೆ. ಆದ್ದರಿಂದಲೇ ಈಗಲೂ ಕೂಡ ಜಾತಿ ಮತ ಭೇಧವಿಲ್ಲದೆ ಮನೆಯ ಮುಂದೆ ತುಳಸೀಗಿಡವನ್ನು ಸ್ಥಾಪಿಸುವುದು ರೂಢಿಯಲ್ಲಿದೆ.

ತುಳಸೀಕಾಷ್ಠದಿಂದ ಮಾಡಿತ ಮಣಿಗಳಿಂದ ನಿರ್ಮಿತವಾದ ಮಾಲೆಯನ್ನು ಧರಿಸಿದರೆ ನಮಗೆ ವಿಷ್ಣುವಿನ ಅನುಗ್ರಹವಾಗುತ್ತದೆ ಎಂದು ತಿಳಿಸುತ್ತಾರೆ. ಈ ತುಳಸಿ ಮಣಿಯ ಮಾಲೆಯನ್ನು ಧರಿಸಿದ ವೈಷ್ಣವರು ಭುವನವನ್ನೇ ಪಾವನಮಾಡುತ್ತಾರೆ. ಎಂದು ತುಳಸಿಯ ಮಹಿಮೆಯನ್ನು ಬಣ್ಣಿಸುತ್ತಾ ತಿಳಿಸಿದ್ದಾರೆ.

**ಯಾದೃಷ್ಟಾ ನಿಖಿಲಾಘಸಂಗ ಶಮನೀ ಸ್ಪೃಷ್ಟಾ ವಪುಃ ಪಾವನೀ–**
**ರೋಗಾಣಾಮಭಿವಂದಿತಾ ನಿರಸನೀ ಸಿಕ್ತಾಂತಕತ್ರಾಸಿನೀ**
**ಪ್ರತ್ಯಾಸತ್ತಿ ವಿಧಾಯಿನೀ ಭಗವತಃ ಕೃಷ್ಣಸ್ಯಸಂರೋಪಿತಾ**
**ನ್ಯಸ್ತಾ ತಚ್ಚರಣೇ ವಿಮುಕ್ತಿ ಫಲದಾ ತಸ್ಯೈ ತುಲಸ್ಯೈ ನಮಃ**

ತುಳಸಿ ಗಿಡವನ್ನು ಮನೆಯ ಮುಂದೆ ಬೆಳಸಿದರೆ ಮನೆಗೆ ಬರುವಾಗಲೆಲ್ಲ ತುಳಸಿಯ ದರ್ಶನವಾಗುತ್ತದೆ. ಆಗ ನಾವು ಮಾಡಿದ ಪಾಪಗಳ ಸಮುದಾಯವನ್ನ ಕಳೆದುಕೊಳ್ಳಲು ಸಾಧ್ಯ. ತುಳಸಿಯ ಸ್ಪರ್ಶಮಾಡಿದರೆ ನಮ್ಮ ಶರೀರವು ಪಾವನವಾಗುತ್ತದೆ. ರೋಗಗಳೆಲ್ಲವು ತುಳಸಿಗೆ ನಮಸ್ಕರಿಸುವುದರಿಂದ ಪರಿಹಾರವಾಗುತ್ತದೆ. ತುಳಸಿ ಗಿಡದ ಬುಡಕ್ಕೆ ನೀರನ್ನು ಸಿಂಪಡಿಸಿದರೆ ಯಮನ ಭಯವನ್ನು ನಾಶಮಾಡುತ್ತಾಳೆ. ಅಂದರೆ ನರಕವು ಪ್ರಾಪ್ತವಾಗದಂತೆ ಮಾಡುತ್ತಾಳೆ. ಭಗವಂತನಿಗೆ ತುಳಸೀದಳದಿಂದ ಅರ್ಚಿಸಿದರೆ ತುಳಸಿಯು ಭಗವಂತನ ಸಾಮೀಪ್ಯವನ್ನು ಕರುಣಿಸುತ್ತಾಳೆ. ಭಗವಚ್ಚರಣಕಮಲದಲ್ಲಿ ತುಳಸೀದಳವನ್ನು ಸಮರ್ಪಿಸಿದರೆ ಮೋಕ್ಷರೂಪ ಮಹಾಫಲವನ್ನೇ ನೀಡುತ್ತಾಳೆ. ಆದರೆ ಈ ರೀತಿಯಾದ ಫಲಗಳು ಸಿಗಬೇಕಾದರೆ ಭಕ್ತಿಯಿಂದ ತುಳಸಿಯ ಸೇವೆಯನ್ನು ಮಾಡಬೇಕು. ಆದ್ದರಿಂದ ಪ್ರತಿನಿತ್ಯವೂ ತುಳಸೀಗಿಡಕ್ಕೆ ನೀರುಹಾಕುವುದು, ದೀಪಹಚ್ಚುವುದು, ಪ್ರದಕ್ಷಿಣೆ ಬಂದು ನಮಸ್ಕರಿಸುವುದು ಅರ್ಹತೆಯುಳ್ಳವರು ತುಳಸಿಯನ್ನು ಕಿತ್ತು ಭಗವಂತನಿಗೆ ಅರ್ಪಿಸುವುದರಿಂದ ಭಗವಂತನ ಅನುಗ್ರಹವಾಗಲು

**ಶ್ರೀಮಾಧ್ವಗ್ರಂಥಗಳ ಅಧ್ಯಯನ ನಿಮ್ಮ ಯೋಗ್ಯತೆಗೆ ಸರಿಯಾಗಿ ಮಾಡಿರಿ**

ಸಾಧ್ಯ. ಕಾರ್ತಿಕಮಾಸದಲ್ಲಿ ವಿಶೇಷವಾಗಿ ತುಳಸೀ ಪೂಜೆಯನ್ನು ಮಾಡಿ ಭಗವಂತನ ಗುಣಗಾನ ಮಾಡುತ್ತಾ ತುಳಸೀ ಸಂಕೀರ್ತನೆಯನ್ನು ಭಕ್ತಿಯಿಂದ ಆಚರಿಸಬೇಕು. ಇಂಥಹ ತುಳಸಿಯನ್ನು ಮನೆಯ ಮುಂದೆ ಸ್ಥಾಪಿಸಿ ಯಥಾಯೋಗ್ಯವಾಗಿ ಸೇವಿಸಿ ಭಗವಂತನ ವಿಶೇಷ ಅನುಗ್ರಹಕ್ಕೆ ಪಾತ್ರರಾಗೋಣ. ★

---

(2ನೇ ಪುಟದಿಂದ...)

ನಾಶವಿಲ್ಲ. ಆಕಾಶ ಹೇಗೆ ಅಸಂಗವೋ ಅಂದರೆ ಆಕಾಶ ಹೇಗೆ ಯಾವುದನ್ನೂ ಅಂಟಿಸಿಕೊಳ್ಳುವುದಿಲ್ಲವೋ ಅದೇ ರೀತಿ ಆಕಾಶದಂತೆ ನಮ್ಮ ದೇವರಿಗೆ ಯಾವ ದೋಷವೂ ಅಂಟಲಾರದು. ಚಿಂತಾ-ಸಂತಾಪ ಪುಣ್ಯ-ಪಾಪಗಳ ಲೇಪ, ಹುಟ್ಟು-ಸಾವು, ರೋಗ-ರುಜಿನ ಯಾವ ಕೊರತೆಯೂ ಭಗವಂತನನ್ನು ಸ್ಪರ್ಶಿಸದು. ಇದಕ್ಕೆಲ್ಲ ಉದಾಹರಣೆ ಆಕಾಶ. ಆಕಾಶದಂತೆ ಭಗವಂತನ ವ್ಯಾಪ್ತಿಯನ್ನು ಭಗವಂತನ ಅಸಂಗವನ್ನು ಮುನಿಯಾದವನು ಸದಾಕಾಲ ಚಿಂತನೆಮಾಡುತ್ತಲೇ ಇರುತ್ತಾನೆ. ಇದನ್ನು ಆಚಾರ್ಯರು "ತಂತ್ರಭಾಗವತ" ಎಂಬ ಪ್ರಮಾಣದ ಮೂಲಕ ಸುಂದರವಾಗಿ ವ್ಯಾಖ್ಯಾನಿಸಿದ್ದಾರೆ. ★

---

(4ನೇ ಪುಟದಿಂದ...)

ಕರೆಯುತ್ತಾರೆ. ಸ್ಯಂದೂ ಪ್ರಸ್ರವಣೆ ಎಂಬ ಧಾತುವಿನಿಂದ ಮೋಕ್ಷಾದಿ ಪುರುಷಾರ್ಥಕೊಡುವ ಕಾರಣ ದೇಹವು ಸ್ಯಂದನ ಎಂದು ಹೇಳಲ್ಪಟ್ಟಿದೆ. (ಈ ಶರೀರವು ರಥವೆಂದು ಉಪನಿಷತ್ತಿನಲ್ಲಿ ಹೇಳಿದ್ದಾರೆ.) ವಿಷಯಗಳನ್ನು ಕುರಿತು ಓಡುವ ಇಂದ್ರಿಯಗಳೇ ಈ ಶರೀರವೆಂಬ ರಥದ ಕುದುರೆಗಳು. ಸದಸದ್ವಿವೇಕ ಬುದ್ಧಿಯು ಸಾರಥಿ. ಮನಸ್ಸು ಕಡಿವಾಣ. ಶಬ್ದಾದಿ ವಿಷಯಗಳು, ಇಂದ್ರಿಯಗಳೆಂಬ ಕುದುರೆಗಳು ಹೋಗತಕ್ಕ ಮಾರ್ಗ. ಈ ಶರೀರವೆಂಬ ರಥದಲ್ಲಿ ಮುಖ್ಯಸ್ವಾಮಿಯಾಗಿ ಪರಮಾತ್ಮನು ಹಾಗೂ ಅಮುಖ್ಯಸ್ವಾಮಿಯಾಗಿ ಜೀವನು ವಾಸಮಾಡುತ್ತಾನೆ. ಪ್ರಕೃತ ಇಲ್ಲಿ ಪರಮಾತ್ಮಸ್ವರೂಪನಾದ ಕೃಷ್ಣನು ಹಾಗೂ ಜೀವ ಸ್ವರೂಪನಾದ ಅರ್ಜುನನು ರಥದಲ್ಲಿ ಕುಳಿತು ಗುರುಶಿಷ್ಯಭಾವದಿಂದ ಮಿಳಿತರಾಗಿ ಯುದ್ಧಾರಂಭದಲ್ಲಿ ಶಂಖದಂತೆ ಆಕಾರವುಳ್ಳ ಪ್ರಣವದ ಅರ್ಥವನ್ನು ಗೀತೋಪದೇಶರೂಪವಾಗಿ ನಡೆಸುತ್ತಾರೆ. ಎಂಬ ಗೂಢಾರ್ಥವು ಇಲ್ಲಿ ಅಡಕವಾಗಿದೆ.

(ಮುಂದುವರಿಯುವುದು)

**ಎಷ್ಟೋ ಜನುಮದ ಸುಕೃತದಿಂದ ಪ್ರಾಪ್ತವಾದ ಈ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಿ.**

ಪ್ರಶ್ನೋತ್ತರ-ಪದಬಂಧ

# ನೆನಪಿನ ಅಂಗಳ

ವಿ॥ ಶಂಕರನಾರಾಯಣಾಚಾರ್ಯ

1) ಶೇಷದೇವರ ಸ್ಥಾನಕ್ಕೆ ಬರುವ ದೇವತೆ ಯಾರು?

2) ಬಾಂಬೊಳೆ ಎಂದರೇನು?

3) ವಾಲ್ಮೀಕಿ ರಾಮಾಯಣದಲ್ಲಿ ಎಷ್ಟು ಕಾಂಡಗಳಿವೆ?

4) ವಾಲ್ಮೀಕಿ ರಾಮಾಯಣದಲ್ಲಿ ಎಷ್ಟು ಶ್ಲೋಕಗಳಿವೆ?

5) ವಾಲ್ಮೀಕಿ ರಾಮಾಯಣದಲ್ಲಿ ಎಷ್ಟು ಸರ್ಗಗಳಿವೆ?

6) ವಿಶ್ವದ ಯಾವ ದೇಶದಲ್ಲಿ ಸರ್ಪಗಳಿಲ್ಲ?

7) ಅರ್ಧರಾತ್ರಿಯಲ್ಲಿ ಸೂರ್ಯನನ್ನು ಕಾಣುವ ದೇಶವಾವುದು?

8) ಬೆಂಕಿ ಸುರಿಸುವ ಮರವುಳ್ಳ ದೇಶ ಯಾವುದು?

9) ವರ್ಷದ ಅತ್ಯಂತ ಚಿಕ್ಕ ದಿನ ಯಾವುದು

10) ಜಗತ್ತಿನಲ್ಲಿ ಎಲ್ಲಕ್ಕೂ ದೊಡ್ಡದಾದ ದ್ವೀಪ ಯಾವುದು?

**ಕಳೆದ ಸಂಚಿಕೆಯ ಉತ್ತರ:**

1) ಭಾರತೀಪತಿವಾಯುದೇವರು 2) ರಮಾಬ್ರಹ್ಮಾದಿ ಮನುಷ್ಯೋತ್ತಮಾಂತ ಜೀವರು 3) ಅನುಷ್ಟುಪ್ 4) 32 5) ಸಂಸ್ಕೃತ 6) ಮಾಸ್ತಿ ವೇಂಕಟೇಶ ಅಯ್ಯಂಗಾರ್ 7) ಶ್ರೀಕೃಷ್ಣ 8) ದ್ರುಪದನ 9) ಯುಯುತ್ಸು 10) ಶ್ರೀವೇದವ್ಯಾಸರು

| | | | | | |
|---|---|---|---|---|---|
| 1 ರ | ಘು | 2 ಕು | ಲ | 3 ವೀ | ರ |
| ಜ | ■ | ರಿ | ■ | ರ | ■ |
| 4 ನೀ | 7 ತ್ರಿ | ■ | 5 ಬ | ಜಾ | 9 ರಿ |
| ■ | 8 ಲ | ಗ್ | ನ | ■ | ಕ್ತ |
| 6 ಬ | ಕ | ■ | ವಾ | ■ | ಹ |
| ಲೆ | ■ | 11 ಅ | ಸಿ | ಹ | ಸ್ತ |

ಪ್ರಾಣಿ ಹಿಂಸೆ ಮಾಡಬೇಡಿ

**ಎಡದಿಂದ ಬಲಕ್ಕೆ:**

1) ಕುದುರೆಯ ದಂತ (5)
2) ಸ್ತುತಿಸಲು ಅನುಗ್ರಹ ಕೊಟ್ಟವ (5)
3) ಅಹಂಕಾರ ಕೊಟ್ಟ ಅನುಗ್ರಹ (5)
4) 'ಶಂಖಾಪರನಾಮಕನ ಸುತ' ತಿರುಗಿದ್ದಾನೆ (5)
5) ಹಸುವಿನಂತೆ ಮೊಗವುಳ್ಳವ (5)

| | | | | |
|---|---|---|---|---|
| 1 | 2 | 3 | 4 | 5 |
| 2 | | | | |
| 3 | | | | |
| 4 | | | | |
| 5 | | | | |

**ಉತ್ತರ ಮುಂದಿನ ಸಂಚಿಕೆಯಲ್ಲಿ**

**ಮೇಲಿನಿಂದ ಕೆಳಕ್ಕೆ:**

1) ಮಾರುತಿಯ ಆಯುಧ (5)
2) ಸನ್ಯಾಸಿಯ ನಿಗ್ರಹ (5)
3) 'ಕಾಡಿನ ಮದುಮಗ' ತಿರುಗಿದ್ದಾನೆ (5)
4) ಶಂಖವನ್ನೇ ವರವಾಗಿ ಕೊಟ್ಟವ (5)
5) ಗಂಡು ಹೊಳೆ, ಹಲ್ಲು ಒಂದೆಡೆ ಸೇರಿವೆ (5)

**ನೀಚರನಾಶ್ರಯಿಸಿ ಕೆಡಬೇಡಿ.**